
# ಮಹಾಪುರಾಣ

ಪ್ರೊ. ಜೀವಂಧರಕುಮಾರ ಹೋತಪೇಟಿ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಮಹಾಪುರಾಣ

ಪ್ರಧಾನ ಸಂಪಾದಕರು

**ಪ್ರೊ|| ಎಸ್.ಜಿ. ಸಿದ್ಧರಾಮಯ್ಯ**

ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ಸಂಪಾದಕರು

**ಡಾ| ಎಂ.ಎ. ಜಯಚಂದ್ರ**

ಲೇಖಕರು

**ಪ್ರೊ. ಜೀವಂಧರಕುಮಾರ ಹೋತಪೇಟ**

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

ಮಹಾಪುರಾಣ
ಲೇಖಕರು : ಪ್ರೊ. ಜೀವಂಧರಕುಮಾರ ಹೋತಪೇಟ, ಇತಿಹಾಸ ಪ್ರಾಧ್ಯಾಪಕರು, ಭದ್ರಾವತಿ.
ಮೊದಲ ಮುದ್ರಣ : ೨೦೦೫

ಪುಟಗಳು : xii + 24

ಪ್ರತಿಗಳು : ೨೦೦೦

© ಲೇಖಕರದು

ISBN : 81-7713-189-3

ಬೆಲೆ ರೂ. ೧೦.೦೦

ಭಗವಾನ್ ಮಹಾವೀರರ ೨೬೦೦ನೆಯ ಜನ್ಮಕಲ್ಯಾಣ
ಮಹೋತ್ಸವದ ಪ್ರಕಟಣಾ ಸಮಿತಿ, ಬೆಂಗಳೂರು

೧. ಡಾ। ಎಂ.ಎ. ಜಯಚಂದ್ರ, ಅಧ್ಯಕ್ಷರು
೨. ಶ್ರೀ ಎಸ್.ಎನ್. ಅಶೋಕ್‌ಕುಮಾರ್, ಸದಸ್ಯರು
೩. ಶ್ರೀ ನಾಗರಾಜ್ ಪೂವಣ್ಣ, ಸದಸ್ಯರು
೪. ಶ್ರೀ ಎ.ಪಿ. ಕುಮಾರ್ ಜೈನ್, ಸದಸ್ಯರು
೫. ಶ್ರೀ ಮಲ್ಲಿನಾಥ ಪಾಟೀಲ್, ಸದಸ್ಯರು
೬. ಶ್ರೀಮತಿ ವಿಮಲ ಸುಮತಿಕುಮಾರ್, ಸದಸ್ಯರು
೭. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂಚಾಲಕರು
೮. ಶ್ರೀ ಡಿ. ಸುರೇಂದ್ರ ಕುಮಾರ್, ವಿಶೇಷ ಆಹ್ವಾನಿತರು

ಪ್ರಕಾಶಕರು :
ಎನ್. ತಿಪ್ಪೇಸ್ವಾಮಿ
ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಮುದ್ರಕರು
ಶ್ರೀ ವೆಂಕಟೇಶ್ವರ ಪ್ರಿಂಟರ್ಸ್
ಗವೀಪುರ ಗುಟ್ಟಹಳ್ಳಿ, ಕೆ.ಜಿ. ನಗರ, ಬೆಂಗಳೂರು-19
ದೂರವಾಣಿ : 26677556

# ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು - ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಒಂದು ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು - ಬದುಕಿನ ಎಲ್ಲಾ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ್ಧ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಬೆಳೆಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡು ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನ ಶಕ್ತಿ 2 x 2 = 4 ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹುಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ

ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು ? ಇದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು ; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ - ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು; ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ. -

ಸಾವಿರಾರು ವರ್ಷಗಳ ಇತಿಹಾಸದಲ್ಲಿ, ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಕಳತನ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ, ಹಿಂದೆಂದಿನ ಆಕ್ರಮಣಗಳಿಗಿಂತ

ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲಾ ಜ್ಞಾನಶಾಖೆಗಳ ಪರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮ್ಮಖೇಣ ವಿಷಯ ಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ.

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತನಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಈ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನ ಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ

ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ - ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು, ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

ಜೈನಧರ್ಮಕ್ಕೆ ಐದುಸಾವಿರ ವರ್ಷಗಳ ಪ್ರಾಚೀನ ಇತಿಹಾಸವಿದೆ. ತಾನು ಬೋಧಿಸಿದ ಅಹಿಂಸೆ ಅಪರಿಗ್ರಹನೀತಿ ಸಮ್ಯಕ್‌ತತ್ವ ಹಾಗೂ ಅನೇಕಾಂತವಾದಗಳ ಪ್ರತಿಪಾದನೆಯ ಮುಖೇನ ಈ ನೆಲದ ಜೀವನಗತಿಯ ಮೇಲೆ ಅಪಾರ ಪರಿಣಾಮವನ್ನು ಉಂಟುಮಾಡಿದ ಧರ್ಮವಿದು. ಕನ್ನಡ ಸಾಹಿತ್ಯದ ಮಟ್ಟಿಗಂತೂ ಜೈನಧರ್ಮದ ಪ್ರಭಾವ ಪ್ರೇರಣೆಗಳು ನಖಮಾಂಸಭಾವದ ನೆಲೆಯವು. ಕನ್ನಡ ನೆಲದಲ್ಲಿ ನಡೆದ ಹಲವು ಧಾರ್ಮಿಕ ಸಂಘರ್ಷಗಳ ಮುಖಾಮುಖಿತ್ವದಲ್ಲಿ ಜೈನಧರ್ಮದ ಏಳುಬೀಳುಗಳು ಕನ್ನಡ ಸಂಸ್ಕೃತಿಯ ಜೀವನೇತಿಹಾಸವನ್ನು ಪ್ರತಿಬಿಂಬಿಸುವುದೇ ಆಗಿದೆ.

ಭಗವಾನ್ ಮಹಾವೀರರ ೨೬೦೦ನೆಯ ಜನ್ಮಕಲ್ಯಾಣ ಮಹೋತ್ಸವದ ಅಂಗವಾಗಿ ಜೈನಧರ್ಮಕ್ಕೆ ಸಂಬಂಧಿಸಿದ ಕೆಲವು ವಿಚಾರಗಳ ಪುಸ್ತಿಕೆಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಸಮಣಸುತ್ತಂ, ಅನೇಕಾಂತವಾದ, ಅಹಿಂಸೆ, ಹೇಮಚಂದ್ರ, ಮಹಾವೀರವಾಣಿ, ಸಾಮ್ರಾಟ್ ಶ್ರೇಣಿಕ ಬಿಂಬಸಾರ, ಮಹಾಪುರಾಣ, ಕುಂದಾಕುಂದಾಚಾರ್ಯ, ಚಂದನಾಂಬಿಕೆ - ಇವೇ ಈ ಪುಸ್ತಿಕೆಗಳು.

ಧಾರ್ಮಿಕ ವಿಚಾರಗಳು ಕೇವಲ ಪಂಡಿತಮಾನ್ಯರ ಜಿಜ್ಞಾಸೆಯ ವಿಚಾರಗಳಾಗಿ ಮಾತ್ರ ಉಳಿಯದೆ ಶ್ರೀಸಾಮಾನ್ಯರ ಅರಿವಿಗೆ ಅನ್ನವಾಗಬೇಕು ಎಂಬುದು ಇಂಥ ಪ್ರಕಟಣೆಯ ಹಿಂದಿನ ಉದ್ದೇಶ.

ಭಗವಾನ್ ಮಹಾವೀರರ ೨೬೦೦ ನೆಯ ಜನ್ಮಕಲ್ಯಾಣ ಮಹೋತ್ಸವದ ರಾಜ್ಯ ಸಮಿತಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಅಪೇಕ್ಷೆಗೆ ಅನುಸಾರವಾಗಿ ಈ ಪ್ರಕಟಣಾಕಾರ್ಯ ನಡೆಯುತ್ತಿದೆ. ಸಂಪಾದಕ ಮಂಡಳಿಯವರು ವಿಷಯಗಳ ಆಯ್ಕೆ ಮಾಡಿ, ವಿಷಯತಜ್ಞರಿಂದ ಬರೆಸುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಪ್ರಧಾನ ಸಂಪಾದಕರಾಗಿ ಡಾ|| ಎಂ.ಎ. ಜಯಚಂದ್ರ ಅವರು ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಈ ಎಲ್ಲ ಮಹನೀಯರಿಗೆ ಕನ್ನಡ ಪುಸ್ತಕ ಪ್ರಾಧಿಕಾರವು ಆತ್ಮೀಯ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ದಿನಾಂಕ : ೮-೯-೨೦೦೫ ಪ್ರೊ|| ಎಸ್.ಜಿ. ಸಿದ್ಧರಾಮಯ್ಯ

ಸ್ಥಳ : ಬೆಂಗಳೂರು ಅಧ್ಯಕ್ಷರು

# ಮುನ್ನುಡಿ

ರಾಮಾಯಣ, ಮಹಾಭಾರತ ಎಂಬ ಮಹಾನ್ ಗ್ರಂಥಗಳಿಗೆ ಹಿಂದೂಧರ್ಮದಲ್ಲಿ ಎಂಥ ಉನ್ನತವಾದ ಸ್ಥಾನಮಾನಗಳಿವೆಯೋ ಅಂಥದೇ ಉನ್ನತವಾದ ಸ್ಥಾನಮಾನ ಜೈನಧರ್ಮದಲ್ಲಿ 'ಮಹಾಪುರಾಣ' ಎಂಬ ಮಹಾನ್ ಗ್ರಂಥಕ್ಕಿದೆ. ಇದು ಪುರಾತನ ಕಾಲದ ೬೩ ಜನ ಜೈನ ಮಹಾಪುರುಷರ ಜೀವನ ಕಥನವನ್ನು ಒಳಗೊಂಡಿದೆ. ಅಲ್ಲದೆ ಈ ಮಹಾಪುರುಷರ ಕಥೆಗಳೊಂದಿಗೆ ಅವರ ಭವಾವಳಿ ಕಥೆಗಳೂ, ಅವರ ಆಪ್ತರ ಕಥೆಗಳೂ ಉಪಕಥೆಗಳೂ ಸೇರಿಕೊಂಡು ಕಥೆಯ ಮಹಾಸಾಗರವೇ ಆಗಿದೆ.

ಪ್ರಾತಃಸ್ಮರಣೀಯ ಜಿನಸೇನ-ಗುಣಭದ್ರ ಆಚಾರ್ಯದ್ವಯರ (ಕ್ರಿ.ಶ. ೮೯೮) ಸಂಸ್ಕೃತ ಭಾಷೆಯ ಮಹಾನ್ ಕೃತಿಯೇ ನಮಗೆ ದೊರೆತಿರುವ ಆದ್ಯ 'ಮಹಾಪುರಾಣ' ಗ್ರಂಥವಾಗಿದೆ. ಇವರಿಗೆ ಪೂರ್ವದಲ್ಲಿದ್ದ ಕವಿ ಪರಮೇಷ್ಠಿ ಹಾಗೂ ಕೂಚಿಭಟ್ಟಾರಕರ ಕೃತಿಗಳು ಲಭ್ಯವಾಗಿಲ್ಲ. ಕ್ರಿ.ಶ. ೯೬೫ರಲ್ಲಿ ಮಹಾಕವಿ ಪುಷ್ಪದಂತನು ಅಪಭ್ರಂಶ ಭಾಷೆಯಲ್ಲಿ, ಕ್ರಿ.ಶ. ೧೧೬೨ರಲ್ಲಿ ಶ್ವೇತಾಂಬರ ಸಂಪ್ರದಾಯದ ಹೇಮಚಂದ್ರನು ಸಂಸ್ಕೃತ ಭಾಷೆಯಲ್ಲಿ ಒಂದೊಂದು ಮಹಾಪುರಾಣವನ್ನು ಬರೆದಿದ್ದಾರೆ. ಕನ್ನಡದಲ್ಲಿ ಚಾವುಂಡರಾಯ ಪುರಾಣವೇ ಏಕೈಕ ಪ್ರಾಚೀನ ಮಹಾಪುರಾಣವಾಗಿದೆ.

ಪಂಪಾದಿ ಕನ್ನಡ ಕವಿಗಳಿಗೆ ಸಂಸ್ಕೃತ 'ಮಹಾಪುರಾಣ'ವೇ ಆಕರ ಗ್ರಂಥವಾಗಿದೆ. 'ಮನುಷ್ಯ ಜಾತಿ ತಾನೊಂದೆ ವಲಂ' - ಎಂಬ ಪಂಪನ ಕವಿವಾಣಿಯ ಬೇರು ಈ ಮಹಾಪುರಾಣದಲ್ಲಿದೆ. ಇದರ ಒಂದು ಸ್ಥೂಲ ಪರಿಚಯವೇ ಈ ಕಿರುಕೃತಿಯಾಗಿದೆ.

ಮಹೋತ್ಸವದ ರಾಜ್ಯ ಸಮಿತಿಯ ಅಧ್ಯಕ್ಷರೂ, ಸನ್ಮಾನ್ಯ ಗೃಹಸಚಿವರೂ ಆಗಿರುವ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರ ಸದಾಶಯದಂತೆ, ಜೈನಧರ್ಮದ

ಪವಿತ್ರ ಗ್ರಂಥವೊಂದರ ಪರಿಚಯವನ್ನು ಜನಸಾಮಾನ್ಯರಿಗೆ ಮಾಡಿಸುವ ಸಲುವಾಗಿ 'ಮಹಾಪುರಾಣ'ದ ಬಗ್ಗೆ ಕಿರು ಪುಸ್ತಕ ಬರೆಯಿಸಲು ಪ್ರಕಟಣಾ ಸಮಿತಿ ನಿರ್ಧರಿಸಿತು.

ಪ್ರೊ. ಜೀವಂಧರ ಕುಮಾರ ಹೋತಪೇಟೆ ಅವರು ಭದ್ರಾವತಿಯ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿದ್ದಾರೆ. ಅನೇಕ ಗ್ರಂಥಗಳ ಲೇಖಕರೂ ಸಜ್ಜನರೂ ಆಗಿದ್ದಾರೆ. ಇವರು ಸಮಿತಿಯ ಕರೆಗೆ ಓಗೊಟ್ಟು ಈ ಕಿರು ಹೊತ್ತಗೆಯನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರಿಗೆ ಸಮಿತಿಯು ಆಭಾರಿಯಾಗಿದೆ.

ಡಾ. ಎಂ.ಎ. ಜಯಚಂದ್ರ
ಅಧ್ಯಕ್ಷರು
ಭಗವಾನ್ ಮಹಾವೀರರ ೨೬೦೦ನೆಯ ಜನ್ಮ ಕಲ್ಯಾಣ
ಮಹೋತ್ಸವದ ಪ್ರಕಟಣಾ ಸಮಿತಿ, ಬೆಂಗಳೂರು

# ಮಹಾಪುರಾಣ

(ಒಂದು ಪರಿಚಯ)

## ಪೀಠಿಕೆ

ಜೈನಧರ್ಮದ ೨೪ನೇ ತೀರ್ಥಂಕರ ವರ್ಧಮಾನ ಮಹಾವೀರ- ಜ್ಞಾತ್ರಿಕುಲ ಎಂಬ ಕ್ಷಾತ್ರಕುಟುಂಬದಲ್ಲಿ ಜನಿಸಿ ವಸ್ತುಸ್ವರೂಪದ ಯಥಾರ್ಥತೆಯನ್ನು ತಿಳಿಯಲು ತನ್ನ ಮೂವತ್ತನೆಯ ವಯಸ್ಸಿನಲ್ಲಿ ಸನ್ಯಸನ ಸ್ವೀಕರಿಸಿ ಹನ್ನೆರಡು ವರ್ಷಗಳ ಕಾಲ ಮೌನಧಾರಣೆ ಮಾಡಿ, ಇಂದ್ರಿಯಗಳ ಮೇಲೆ ವಿಜಯ ಸಾಧಿಸಿ ಜ್ಞಾನ, ಧ್ಯಾನ ಮತ್ತು ತಪಗಳಲ್ಲಿ ನಿರತನಾಗಿ, ಜ್ಞಾನಗಳಲ್ಲಿ ಸರ್ವೋತ್ಕೃಷ್ಟವಾದ 'ಕೇವಲಜ್ಞಾನ'ವನ್ನು ಪಡೆದು 'ಜಿನ'ನಾದ. ಇತರರಿಂದ ಪೂಜಿಸಿಕೊಳ್ಳುವ ಅರ್ಹತೆಯನ್ನು ಪಡೆದು 'ಅರ್ಹಂತ'ನಾದ. ತಾನು ಸಾಗಿ ಬಂದ ಮಾರ್ಗವನ್ನು ಇನ್ನಿತರರಿಗೂ ತೋರಿಸುವ ಮೂಲಕ ತೀರ್ಥ ಪ್ರವರ್ತಕನಾಗಿ "ತೀರ್ಥಂಕರ"ನಾದ. ಅಂತಿಮವಾಗಿ ಜೀವನ್ಮರಣಗಳ ಸಂಕೋಲೆಗಳಿಂದ ಬಿಡುಗಡೆಯಾಗಿ "ಸಿದ್ಧ ಪರಮೇಷ್ಠಿ" ಯೂ ಆದ.

ತನ್ನ 'ಕೇವಲಜ್ಞಾನ'ದಿಂದ ವಸ್ತುಗಳ ಯಥಾರ್ಥ ಸ್ವರೂಪವನ್ನು ತಿಳಿದ ಮಹಾವೀರ ತನ್ನ ಅನುಭವ ಗಮ್ಯ ಜ್ಞಾನವನ್ನು ತನ್ನ ಸಮವಸರಣ ಧರ್ಮಸಭೆಯಲ್ಲಿ 'ಓಂ'ಕಾರ ದಿವ್ಯಧ್ವನಿಯ ಮೂಲಕ ಪ್ರಕಟಿಸಿದಾಗ ಆ ಸಭೆಯಲ್ಲಿದ್ದ ಆತನ ಪ್ರಮುಖ ಶಿಷ್ಯ ಗೌತಮ ಗಣಧರರು ಅರ್ಥೈಸಿ ಹೇಳಿದಾಗ ಆ ವಾಣಿ ಮೌಖಿಕ ರೂಪದಲ್ಲಿ ಸುಮಾರು ಏಳು ಶತಮಾನಗಳಕಾಲ ಹರಿದು ಬಂದು ದ್ವಾದಶಾಂಗ ಶಾಸ್ತ್ರವಾಗಿ "ಜೈನಾಗಮ" ವೆಂದು ಹೆಸರು ಪಡೆಯಿತು.

ಈ ಕಾರ್ಯದಲ್ಲಿ ಮಹತ್ವದ ಪಾತ್ರವಹಿಸಿದವರೆಂದರೆ ಗೌತಮಸ್ವಾಮಿ, ಸುಧರ್ಮಾಚಾರ್ಯ ಹಾಗೂ ಜಂಬೂಸ್ವಾಮಿ ಎಂಬ ಮೂವರು "ಕೇವಲಿಗಳು", ವಿಷ್ಣುಮುನಿ, ನಂದಿಮಿತ್ರ, ಅಪರಾಜಿತ, ಗೋವರ್ಧನ ಮತ್ತು ಭದ್ರಬಾಹು ಎಂಬ ಐವರು "ಶ್ರುತಕೇವಳಿ"ಗಳು. ಈ ಶ್ರುತಕೇವಲಿಗಳಲ್ಲಿ ಕೊನೆಯವರಾದ ಭದ್ರಬಾಹುಗಳು, ಮೌರ್ಯ ಸಾಮ್ರಾಟ ಚಂದ್ರಗುಪ್ತನೊಂದಿಗೆ ದಕ್ಷಿಣದ ಶ್ರವಣಬೆಳಗೊಳಕ್ಕೆ ಆಗಮಿಸಿ ಅಲ್ಲಿಯೇ 'ಸಲ್ಲೇಖನ' ವಿಧಿಯಿಂದ ದೇಹತ್ಯಾಗ ಮಾಡಿದರು. ಅಲ್ಲಿರುವ ಚಿಕ್ಕಬೆಟ್ಟ 'ಚಂದ್ರಗಿರಿ' ಎಂದು ಹಾಗೂ ಗುಹೆ-ಭದ್ರಬಾಹುಗುಹೆ ಎಂದೂ ಇಂದಿಗೂ ಪ್ರಸಿದ್ಧಿ ಪಡೆದಿವೆ.

ಅಂತಿಮ ಶ್ರುತಕೇವಲಿ ಭದ್ರಬಾಹುಗಳ ನಂತರ ಸುಮಾರು ೧೮೩ ವರ್ಷಗಳ ಕಾಲ ವಿಶಾಖದತ್ತ, ಪ್ರೋಷ್ಠಿಲ, ಕ್ಷತ್ರಿಯ, ಜಯಸೇನ, ನಾಗಸೇನ, ಸಿದ್ಧಾರ್ಥ, ಧೃತಿಷೇಣ, ವಿಜಯಸೇನ, ಬುದ್ಧಿಮಾನ್, ಗಂಗದೇವ ಮತ್ತು ಧರ್ಮಸೇನ ಎಂಬ ಮಹಾನ್ ಆಚಾರ್ಯರು ಶ್ರುತಜ್ಞಾನದ ಪರಂಪರೆಯನ್ನು ಮೌಖಿಕವಾಗಿ ಮುಂದುವರೆಸಿದರಾದರೂ ಅದು ಕ್ಷೀಣವಾಗುತ್ತಾ ಬಂದಿತು.

ಧರ್ಮಸೇನಾಚಾರ್ಯರ ನಂತರ ಸುಮಾರು ೨೨೦ ವರ್ಷಗಳ ಕಾಲ, ನಕ್ಷತ್ರ, ಜಯಪಾಲ, ಪಾಂಡು, ಧ್ರುವಸೇನ ಮತ್ತು ಕಂಸಾಚಾರ್ಯರೆಂಬ ಆಚಾರ್ಯರು ಶ್ರುತಜ್ಞಾನ ಪರಂಪರೆಯನ್ನು ಮುಂದುವರೆಸಿದರು.

ಕಂಸಾಚಾರ್ಯರ ನಂತರ ಸುಮಾರು ೧೧೮ ವರ್ಷಗಳಕಾಲ ಆಚಾರ್ಯರುಗಳಾದ ಸುಭದ್ರ, ಅಭಯಭದ್ರ, ಜಯಬಾಹು ಹಾಗೂ ಲೋಹಾಚಾರ್ಯರು ಶ್ರುತಜ್ಞಾನವನ್ನು ಕಾಪಾಡುತ್ತಾ ಬಂದರೂ ಜ್ಞಾನದ ಪ್ರಮಾಣ ಸಾಕಷ್ಟು ಕ್ಷೀಣವಾಗುತ್ತಾ ಬಂದಿತು. ಲೋಹಾಚಾರ್ಯರ ತರುವಾಯ ವಿನಯಂಧರ, ಶ್ರೀದತ್ತ, ಶಿವದತ್ತ ಮತ್ತು ಅರ್ಹದತ್ತರು ಶ್ರುತಜ್ಞಾನದ ಕೆಲವು ಭಾಗಗಳನ್ನ ಮಾತ್ರ ಅರಿತಿದ್ದರು. ಹೀಗೆ ಸುಮಾರು ೬೮೩ ವರ್ಷಗಳ ಕಾಲ ಭಗವಾನ್ ಮಹಾವೀರರಿಂದ ಹೊರಟ 'ಓಂ'ಕಾರ ದಿವ್ಯಧ್ವನಿಯ

ಶ್ರುತಜ್ಞಾನ ಹರಿದು ಬಂದಿತಾದರೂ ಅದು ಕ್ಷೀಣವಾಗುತ್ತಾ ಬಂದಿದ್ದಿತು. ಈ ಎಲ್ಲ ಆಚಾರ್ಯರು ಭಗವಾನ್ ಮಹಾವೀರರ ಮೂಲಸಂಘದ ಆಚಾರ್ಯರೆಂದು ಗುರುತಿಸಲ್ಪಟ್ಟಿದ್ದಾರೆ.

ಈ ಆಚಾರ್ಯರ ನಂತರ ಬಂದ ಅರ್ಹದ್ಬಲಿ ಎಂಬ ಆಚಾರ್ಯರ ಕಾಲದಲ್ಲಿ ಮೂಲಸಂಘದಲ್ಲಿ ಸಂಘ ಭೇದಗಳುಂಟಾಗಿ ನಂದಿಸಂಘ, ದೇವಸಂಘ, ಸೇನಸಂಘ ಹಾಗೂ ಭದ್ರಸಂಘ ಎಂಬ ನಾಲ್ಕು ಸಂಘಗಳು ಅಸ್ತಿತ್ವಕ್ಕೆ ಬಂದವು. ಈ ಸಂಘಗಳು ಪುನಃ ಅನೇಕ ಗಚ್ಛ, ಗಣಗಳಾಗಿ ಭೇದಗಳಾದವು. ಈ ಭೇದಗಳ ಪರಿಣಾಮ ಮೌಖಿಕ ರೂಪದಲ್ಲಿದ್ದ ಶ್ರುತಜ್ಞಾನ ಕ್ಷೀಣವಾಗುತ್ತಾ ಸಾಗಿತು. ಅರ್ಹದ್ಬಲಿ ಆಚಾರ್ಯರ ನಂತರ ಮಾಘನಂದಿ ಆಚಾರ್ಯರಾದರು. ಅವರನಂತರ ಧರಸೇನಾಚಾರ್ಯರ ಕಾಲದಲ್ಲಿ ಶ್ರುತಜ್ಞಾನವನ್ನು ಲಿಪಿಬದ್ಧಗೊಳಿಸುವ ಯೋಚನೆಯುಂಟಾಗಿ ಅವರು ತಮ್ಮ ಶಿಷ್ಯಂದಿರಾದ ಪುಷ್ಪದಂತ ಹಾಗೂ ಭೂತಬಲಿಗಳ ಮೂಲಕ ಜೈನಾಗಮದ ಗ್ರಂಥಗಳನ್ನು ಲಿಪಿಬದ್ಧಗೊಳಿಸಿದರು.

ಈಗ ಲಿಪಿಬದ್ಧವಾಗಿ ಉಳಿದುಕೊಂಡು ಬಂದಿರುವ ಜೈನಾಗಮದ ಗ್ರಂಥಗಳನ್ನು ಅವುಗಳಲ್ಲಿರುವ ವಿಷಯಗಳ ಹಿನ್ನೆಲೆಯಲ್ಲಿ ನಾಲ್ಕು ಅನುಯೋಗಗಳಲ್ಲಿ ಸಂಗ್ರಹಿಸಲಾಗಿದೆ. ಅವುಗಳೆಂದರೆ (೧) ಪ್ರಥಮಾನುಯೋಗ (೨) ದ್ರವ್ಯಾನುಯೋಗ (೩) ಕರಣಾನುಯೋಗ ಮತ್ತು (೪) ಚರಣಾನುಯೋಗ.

ಪ್ರಥಮಾನುಯೋಗವು ತೀರ್ಥಂಕರಾದಿ ೬೩ ಮಹಾಪುರುಷರ ಜೀವನ ಚರಿತ್ರೆಗಳನ್ನು, *ದ್ರವ್ಯಾನುಯೋಗವು* ವಿಶ್ವದ ರಚನೆಗೆ ಕಾರಣಗಳಾದ ಆರು ದ್ರವ್ಯಗಳ ಹಾಗೂ ಸಪ್ತ ತತ್ತ್ವಗಳ ವರ್ಣನೆಯನ್ನು, ***ಕರಣಾನುಯೋಗವು*** ವಿಶ್ವದ ಸ್ವರೂಪವನ್ನು ಹಾಗೂ ***ಚರಣಾನುಯೋಗವು*** ತ್ಯಾಗಿಗಳು ಹಾಗೂ ಜನಸಾಮಾನ್ಯರು ಅನುಸರಿಸಬೇಕಾದ ನೀತಿ ಸಂಹಿತೆಯನ್ನು ವಿವರಿಸುವ ಆಗಮಗ್ರಂಥಗಳಾಗಿವೆ.

ಭಗವಾನ್ ಮಹಾವೀರರು ಮೋಕ್ಷ ಸಾಧನೆಗಾಗಿ ಹೇಳಿದ ಸಮ್ಯಗ್ ದರ್ಶನ, ಸಮ್ಯಗ್ ಜ್ಞಾನ ಮತ್ತು ಸಮ್ಯಗ್ ಚಾರಿತ್ರದಿಂದ ಕೂಡಿದ ಮೋಕ್ಷಮಾರ್ಗದಲ್ಲಿ ದ್ರವ್ಯಾನುಯೋಗವು ಸಮ್ಯಗ್‌ದರ್ಶನದ ಸ್ವರೂಪವನ್ನು, ಕರಣಾನುಯೋಗವು ಸಮ್ಯಗ್‌ಜ್ಞಾನದ ಸ್ವರೂಪವನ್ನು ಹಾಗೂ ಚರಣಾನುಯೋಗವು ಸಮ್ಯಗ್ ಚಾರಿತ್ರದ ಸ್ವರೂಪವನ್ನು ವಿವರಿಸಿದರೆ, ಪ್ರಥಮಾನುಯೋಗವು ಈ ಸಮ್ಯಗ್‌ದರ್ಶನ, ಸಮ್ಯಗ್ ಜ್ಞಾನ ಮತ್ತು ಸಮ್ಯಗ್ ಚಾರಿತ್ರ ಎಂಬ ರತ್ನತ್ರಯಗಳ ಸ್ವರೂಪವನ್ನು ಅರಿತು ಮೋಕ್ಷ ಮಾರ್ಗವನ್ನು ರೂಪಿಸಿಕೊಂಡು ಮೋಕ್ಷಸಾಧನೆಯನ್ನು ಮಾಡಿದ ಮಹಾಪುರುಷರ ಜೀವನ ಚರಿತ್ರೆಯನ್ನು ಹೊದಿದೆ. ಇಂತಹ ಪ್ರಥಮಾನುಯೋಗದ ಗ್ರಂಥಗಳಲ್ಲಿ ಅದ್ವಿತೀಯ ಸ್ಥಾನ ಪಡೆದ ಕೃತಿಯೇ "ಮಹಾಪುರಾಣ".

## ಮಹಾಪುರಾಣದ ರಚನಕಾರರು

ರಾಷ್ಟ್ರಕೂಟ ಸಾಮ್ರಾಜ್ಯದ ಕಾಲ ಕರ್ನಾಟಕ ಇತಿಹಾಸದಲ್ಲಿ ಕ್ಷಾತ್ರಯುಗವೆಂದು ಖ್ಯಾತವಾಗಿದ್ದು, ಅರಬ್ಬ ಪ್ರವಾಸಿ ಸುಲೈಮಾನನಿಂದ ವಿಶ್ವದ ನಾಲ್ಕು ಸಾಮ್ರಾಜ್ಯಗಳಲ್ಲಿ ಒಂದು ಎಂದು ಕರೆಯಲ್ಪಟ್ಟಿದೆ. ಇಂತಹ ಮಹಾನ್ ಸಾಮ್ರಾಜ್ಯದ ದೊರೆಯಾಗಿದ್ದ ಅಮೋಘವರ್ಷ ನೃಪತುಂಗನ ಕಾಲದಲ್ಲಿ (೮೧೫-೮೭೭) ರಾಜ ಗುರುಗಳಾಗಿದ್ದ ಭಗವದ್ ಜಿನಸೇನಾಚಾರ್ಯರು (ಕ್ರಿ.ಶ. ೭೫೩-೮೪೮) ಹಾಗೂ ಅವರ ಶಿಷ್ಯ **ಗುಣಭದ್ರಾಚಾರ್ಯರು** 'ಮಹಾಪುರಾಣ' ಬೃಹತ್ ಗ್ರಂಥದ ರಚನಾಕಾರರಾಗಿದ್ದಾರೆ.

ತೀರ್ಥಂಕರ ಭಗವಾನ್ ಶ್ರೀ ಮಹಾವೀರರ ಶಿಷ್ಯ ಪರಂಪರೆಯಲ್ಲಿ ಬಂದ ಈ ಆಚಾರ್ಯದ್ವಯರು ದಿಗಂಬರ ಸಂಪ್ರದಾಯದ ಸೇನಸಂಘಕ್ಕೆ ಸೇರಿದವರು. ಇವರಲ್ಲಿ ಜಿನಸೇನಾಚಾರ್ಯರು-ಜಯಸೇನಾಚಾರ್ಯರಿಂದ ದೀಕ್ಷೆ ಪಡೆದಿದ್ದರೆ, ಧವಲ-ಜಯಧವಲ ಗ್ರಂಥಗಳಿಗೆ ಟೀಕೆಯನ್ನು ಬರೆದ ವೀರಸೇನಾಚಾರ್ಯರು ವಿದ್ಯಾಗುರುಗಳಾಗಿದ್ದರು. ಆಚಾರ್ಯದ್ವಯರಾದ ದಶರಥ ಗುರುಗಳು ಹಾಗೂ ವಿನಯಸೇನರು ಇವರ ಸಹಪಾಠಿಗಳಾಗಿದ್ದರು.

ರಾಷ್ಟ್ರಕೂಟ ದೊರೆ ಅಮೋಘವರ್ಷ ನೃಪತುಂಗ, ಆತನ ಪುತ್ರ ಆಕಾಲವರ್ಷ, ಸಾಮಂತ ಹಾಗೂ ದಂಡನಾಯಕ ವೀರ ಬಂಕೆಯ ಹಾಗೂ ಬಂಕೆಯನ ಮಗ ಲೋಕಾದಿತ್ಯ ಇವರೆಲ್ಲರಿಗೂ ಪರಮ ಗುರುಗಳಾಗಿದ್ದರು. ಅಮೋಘ ವರ್ಷನ ಆಗ್ರಹದಿಂದಲೇ ಆಚಾರ್ಯರು ಬಹುಕಾಲ ಆತನ ರಾಜಧಾನಿ ಮಾನ್ಯಖೇಟದಲ್ಲಿದ್ದಂತೆ ಕಂಡುಬರುತ್ತದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ಜಿನಸೇನಾಚಾರ್ಯರ ಕಾರ್ಯಕ್ಷೇತ್ರವಾಗಿದ್ದು ಅಮೋಘವರ್ಷನು ಆಚಾರ್ಯರ ಪಾಂಡಿತ್ಯ ಮತ್ತು ಕಾವ್ಯಕಲೆಗೆ ಮಾರುಹೋಗಿದ್ದನೆಂದು ತೋರುತ್ತದೆ. ಆಚಾರ್ಯ ಪರಮ ಶಿಷ್ಯ ಗುಣಭದ್ರರು, "ಮಹಾರಾಜ ಅಮೋಘವರ್ಷ ಭಗವದ್ ಜಿನಸೇನರ ಪಾದಪದ್ಮಗಳಲ್ಲಿ ಪ್ರತಿದಿನ ತನ್ನ ಮಸ್ತಕವನ್ನು ಬಾಗಿಸುವುದರಿಂದ ತನ್ನನ್ನು ಕೃತಕೃತ್ಯನನ್ನಾಗಿ ಭಾವಿಸುತ್ತಿದ್ದನು ಹಾಗೂ ಅವರನ್ನು ಅವನು ಎಂದೂ ಮರೆತವನಲ್ಲ" ಎಂದು ಬರೆದಿದ್ದಾರೆ. ತನ್ನ ಆಸ್ಥಾನಕವಿ ಶ್ರೀವಿಜಯನ ಸಹಯೋಗದೊಂದಿಗೆ ಮೊಟ್ಟಮೊದಲ ಕನ್ನಡ ಗ್ರಂಥ 'ಕವಿರಾಜ ಮಾರ್ಗ'ವನ್ನು ಬರೆದ ಅಮೋಘವರ್ಷ ನೃಪತುಂಗ ತನ್ನ ಸಂಸ್ಕೃತ ಕೃತಿ 'ಪ್ರಶ್ನೋತ್ತರ ಮಾಲೆ'ಯಲ್ಲಿ ತೀರ್ಥಂಕರ ಮಹಾವೀರನಿಗೆ ನಮಿಸಿ, ಜೈನಧರ್ಮದ ಪ್ರಭಾವಕ್ಕೊಳಗಾಗಿ ತಾನು ರಾಜ್ಯವನ್ನು ವಿವೇಕ ಪೂರ್ವಕವಾಗಿ ತೊರೆದಿದ್ದೇನೆಂದು ಹೇಳಿದ್ದಾನೆ. ಇದರಿಂದ ಆತನಿಗೆ ಜಿನಸೇನಾಚಾರ್ಯರ ಸದುಪದೇಶದ ಪ್ರಭಾವ ಉಂಟಾಗಿದ್ದಿತೆಂದು ಹೇಳಬಹುದಾಗಿದೆ.

ಸುಮಾರು ೮೫ ವರ್ಷಗಳ ಕಾಲ ಬದುಕಿದ್ದ ಜಿನಸೇನಾಚಾರ್ಯರು 'ಪಾರ್ಶ್ವಾಭ್ಯುದಯ' ಎಂಬ ಖಂಡಕಾವ್ಯವನ್ನು ರಚಿಸಿದ್ದು ಈ ಕೃತಿಯು ಸಂಸ್ಕೃತ ಸಾಹಿತ್ಯದಲ್ಲಿ ಅದ್ವಿತೀಯ ಕಾವ್ಯವಾಗಿದ್ದು, ಇದರಲ್ಲಿ ೨೩ನೇ ತೀರ್ಥಂಕರನಾದ ಪಾರ್ಶ್ವನಾಥನ ಚರಿತ್ರೆಯು ಸೊಗಸಾಗಿ ಮೂಡಿಬಂದಿದೆ. ಅಲ್ಲದೇ 'ಮಹಾಪುರಾಣ'ದ ಪ್ರಥಮ ಭಾಗವಾದ 'ಪೂರ್ವ ಪುರಾಣ' ಅಥವಾ ಆದಿಪುರಾಣದ ೧೨,೦೦೦ ಶ್ಲೋಕಗಳನ್ನು ಒಳಗೊಂಡ ೪೭ ಪರ್ವಗಳ ರಚನೆಯು ಈ ಜಿನಸೇನಾಚಾರ್ಯರಿಂದಲೇ ಆಗಿದೆ. ಇವರ ಮತ್ತೊಂದು ಶ್ರೇಷ್ಠಕೃತಿ 'ಜಯಧವಲಾ'. ಶ್ರೀ ಮಹಾವೀರ ತೀರ್ಥಂಕರರ ದ್ವಾದಶಾಂಗ

ವಾಣಿಯ ಸ್ವರೂಪವನ್ನು ಒಳಗೊಂಡಿರುವ ಕರಣಾನುಯೋಗದ ಈ ಕೃತಿ ಜೈನ ದಾರ್ಶನಿಕ ಗ್ರಂಥಗಳಲ್ಲಿ ಪ್ರಥಮ ಸ್ಥಾನ ಗಳಿಸಿದೆ. 'ಕಷಾಯ ಪ್ರಾಭೃತ'ದ ಮೊದಲ ಸ್ಕಂಧದ ನಾಲ್ಕು ವಿಭಕ್ತಿಗಳ ಮೇಲೆ ಇವರ ವಿದ್ಯಾಗುರುಗಳಾದ ಆಚಾರ್ಯ ವೀರಸೇನರು ೨೦,೦೦೦ ಶ್ಲೋಕ ಪ್ರಮಾಣವುಳ್ಳ 'ಜಯಧವಲಾ' ಎಂಬ ಟೀಕೆಯನ್ನು ರಚಿಸಿ ಸ್ವರ್ಗಸ್ಥರಾದಾಗ ಅವರ ಮುಖ್ಯ ಶಿಷ್ಯರಾಗಿದ್ದ ಶ್ರೀ ಭಗವದ್ ಜಿನಸೇನಾಚಾರ್ಯರು ೪೦,೦೦೦ ಶ್ಲೋಕ ಪ್ರಮಾಣವುಳ್ಳ ಟೀಕೆಯನ್ನು ರಚಿಸಿ ಗ್ರಂಥವನ್ನು ಪೂರ್ಣ ಮಾಡಿದ್ದಾರೆ. ಈ ಟೀಕೆಯು ಸಂಸ್ಕೃತ ಪ್ರಾಕೃತ ಮಿಶ್ರವಾಗಿದ್ದು ಪದಾರ್ಥಗಳ ಸೂಕ್ಷ್ಮಾತಿ ಸೂಕ್ಷ್ಮವಾದ ವಿವೇಚನೆಯನ್ನು ಒಳಗೊಂಡಿದೆ. ಹೀಗೆ ಜಿನಸೇನಾಚಾರ್ಯರು ಕಾವ್ಯಶಾಸ್ತ್ರದಲ್ಲಿ ಮಾತ್ರವಲ್ಲದೇ ಸಿದ್ಧಾಂತ ಶಾಸ್ತ್ರದಲ್ಲಿಯೂ ಪ್ರಕಾಂಡ ವಿದ್ವಾಂಸರಾಗಿದ್ದರು.

ಜಿನಸೇನಾಚಾರ್ಯರು ತಮ್ಮ ಆಯುಷ್ಯಾವಸಾನವನ್ನು ಅರಿತು, ತಮ್ಮ 'ಮಹಾಪುರಾಣ'ವನ್ನು ಮುಂದುವರೆಸುವ ತಕ್ಕ ಶಿಷ್ಯನನ್ನು ಆಯ್ಕೆ ಮಾಡಲು ತಮ್ಮೆಲ್ಲ ಶಿಷ್ಯರನ್ನು ಕರೆದು ತಮ್ಮ ತಮ್ಮ ಎದುರಿಗೆ ಇದ್ದ ಒಂದು ಒಣಗಿದ ಮರವನ್ನು ಕಾವ್ಯಮಯವಾಗಿ ವರ್ಣಿಸುವಂತೆ ಹೇಳಿದರು. ಆಗ ಒಬ್ಬ ಶಿಷ್ಯ, "ಶುಷ್ಕಂ ಕಾಷಃ ತಿಷ್ಠತ್ಯಗ್ರೇ" ಎಂದಾಗ ಅವರಿಗೆ ತೃಪ್ತಿಯಾಗಲಿಲ್ಲ. ನಂತರ ಇನ್ನೊಬ್ಬ ಶಿಷ್ಯ ಅದೇ ಮರವನ್ನು "ನೀರಸ ತರುರಿಹ ವಿಲಸತಿ ಪುರತಃ" ಎಂದಾಗ ತೃಪ್ತರಾದ ಆಚಾರ್ಯರು ಆ ಶಿಷ್ಯನಿಗೆ ತಮ್ಮ ಮುಂದಿನ ಕಾರ್ಯ ನಿರ್ವಹಿಸುವ ಅಧಿಕಾರ ನೀಡಿದರು. ಆ ಶಿಷ್ಯನೇ ಶ್ರೀ ಗುಣಭದ್ರಾಚಾರ್ಯರು. ಇವರಿಗೆ ಭಗವಜ್ಜಿನ ಸೇನಾಚಾರ್ಯರಲ್ಲದೇ ಆಚಾರ್ಯ ದಶರಥ ಗುರುಗಳು ಪೂಜನೀಯರಾಗಿದ್ದರು. ಮುನಿಲೋಕಸೇನ ಹಾಗೂ ಮಂಡಲಪುರುಷ ಎನ್ನುವ ಇಬ್ಬರು ಶಿಷ್ಯರಿದ್ದರು. ಮುನಿ ಲೋಕಸೇನರು ಮಹಾಪುರಾಣದ ಉತ್ತರ ಭಾಗದ ರಚನೆಗೆ ಸಹಾಯಕರಾಗಿದ್ದರೆ, ಮಂಡಲ ಪುರುಷರು ತಮಿಳು ಭಾಷೆಯಲ್ಲಿ 'ಚೂಡಾಮಣಿ' ನಿಘಂಟು ಎಂಬ ತಮಿಳು ಕೋಶವನ್ನು

ರಚಿಸಿದ್ದಾರೆ.

ಭಗವದ್ ಜಿನಸೇನಾಚಾರ್ಯರ ಸುಯೋಗ್ಯ ಶಿಷ್ಯರಾದ ಗುಣಭದ್ರಾಚಾರ್ಯರು ತಮ್ಮ ಕಾವ್ಯಗುಣದಿಂದ ಪೂಜ್ಯ ಗುರುಗಳ 'ಧವಲಕೀರ್ತಿ'ಯನ್ನು ಇಮ್ಮಡಿಗೊಳಿಸಿದವರು. ಕಾವ್ಯಶಾಸ್ತ್ರದಲ್ಲಿ ಪ್ರಕಾಂಡ ವಿದ್ವಾಂಸರು, ಸಿದ್ಧಾಂತ ಹಾಗೂ ಅಧ್ಯಾತ್ಮ ಶಾಸ್ತ್ರದಲ್ಲಿಯೂ ಅನುಭವಿ ಪಂಡಿತರು, ಸಹಜ ಕವಿಗಳು ಆಗಿದ್ದ ಇವರು ತಮ್ಮ ಬಗ್ಗೆ ಹೇಳಿಕೊಳ್ಳುತ್ತಾ, "ಆಚಾರ್ಯ ಜಿನಸೇನರ ಮತ್ತು ದಶರಥ ಗುರುಗಳ ಶಿಷ್ಯನಾದ ಸುಪ್ರಸಿದ್ಧ ಗುಣಭದ್ರಸೂರಿಯಾದ ನಾನು ಸಂಪೂರ್ಣ ವ್ಯಾಕರಣ ಶಾಸ್ತ್ರದಲ್ಲಿ ಪಾರಂಗತನಾಗಿದ್ದೇನೆ, ಅಗಾಧವಾದ ಸಿದ್ಧಾಂತಸಾಗರವನ್ನು ದಾಟಿರುವುದರಿಂದ ನನ್ನ ಬುದ್ಧಿ ಹಾಗೂ ಪ್ರತಿಭೆ ಸೂರ್ಯ ಪ್ರಕಾಶದಂತೆ ಹೊಳೆಯುತ್ತಿದೆ. ವಿದ್ಯೆ ಹಾಗೂ ಉಪವಿದ್ಯೆಗಳಲ್ಲಿ ನಿಷ್ಣಾತನಾದ ನಾನು ಪ್ರಮಾಣ ಹಾಗೂ ನಯಗಳ ಸ್ವರೂಪವನ್ನು ಚೆನ್ನಾಗಿ ಬಲ್ಲೆ" ಎಂದಿದ್ದಾರೆ.

ಕ್ರಿ.ಶ. ೯ನೇ ಶತಮಾನದಲ್ಲಿ ಜೀವಿಸಿದ್ದ ಗುಣಭದ್ರಾಚಾರ್ಯರು ಪೂರ್ವಪುರಾಣದ ಐದು ಪರ್ವಗಳ, ೧೬೨೦ ಶ್ಲೋಕಗಳನ್ನು ಹಾಗೂ ಉತ್ತರ ಪುರಾಣದ ೩೦ ಪರ್ವಗಳಲ್ಲಿ ೮೦೦೦ ಶ್ಲೋಕಗಳನ್ನು ರಚಿಸಿ ತಮ್ಮ ಗುರುಗಳಾದ ಜಿನಸೇಚಾರ್ಯರಿಂದ ಪ್ರಾರಂಭವಾಗಿದ್ದ 'ಮಹಾಪುರಾಣ'ವನ್ನು ಪೂರ್ಣಗೊಳಿಸಿದರು. ಕರ್ನಾಟಕದ ರಾಜಧಾನಿಗಳಲ್ಲಿಯೇ ತಮ್ಮ ಅಮೂಲ್ಯ ಹಾಗೂ ಅಮರ ಕೃತಿಗಳನ್ನು ರಚಿಸಿ ಜೈನಧರ್ಮದ ಶ್ರೇಯೋಭಿವೃದ್ಧಿಯನ್ನು ಸಾಧಿಸಿದ ಇವರು ಬನವಾಸಿ-೧೨೦೦೦ ಪ್ರಾಂತ್ಯದ ರಾಜಧಾನಿಯಾಗಿದ್ದ ಬಂಕಾಪುರದಲ್ಲಿ ತಮ್ಮ ಉತ್ತರ ಪುರಾಣವನ್ನು ಬರೆದು ಮುಗಿಸಿದಾಗ ಅಲ್ಲಿ ರಾಷ್ಟ್ರಕೂಟ ದೊರೆ ಅಕಾಲ ವರ್ಷನ ಸಾಮಂತ ಲೋಕಾದಿತ್ಯ ಆಳುತ್ತಿದ್ದ. ತ್ರಿಷಷ್ಠಿ ಶಲಾಕ ಪುರುಷರ ಕೃತಿಯಾದ 'ಮಹಾಪುರಾಣ'ದ ಸಂಕೇತವೋ ಎನ್ನುವ ಹಾಗೆ ಅಲ್ಲಿ ೬೩ ಕಂಬಗಳ ಬಸದಿ ಇದ್ದಿತ್ತು. ಇಂದು ಅನ್ಯ ಧರ್ಮೀಯರ ಪಾಲಾಗಿರುವ ಈ ಬಸದಿ ಇರುವ ಬಂಕಾಪುರ ಹಾವೇರಿ

ಜಿಲ್ಲೆಯ ಭಾಗವಾಗಿದ್ದು ಹಾವೇರಿಯಿಂದ ಉತ್ತರಕ್ಕೆ ಸುಮಾರು ೨೦ ಕಿ.ಮೀ. ಅಂತರದಲ್ಲಿದೆ. ಉತ್ತರ ಪುರಾಣವಲ್ಲದೇ ಗುಣಭದ್ರಾಚಾರ್ಯರು 'ಆತ್ಮಾನುಶಾಸನ' ಎಂಬ ಅಧ್ಯಾತ್ಮ ಗ್ರಂಥವನ್ನು, 'ಜಿನದತ್ತ ಚರಿತೆ' ಎಂಬ ಐತಿಹಾಸಿಕ ಗ್ರಂಥವನ್ನು ರಚಿಸಿದ್ದಾರೆ. ಇವರ ಕೃತಿ ಎಂದು ಹೇಳಲಾಗಿರುವ 'ಭಾವಸಂಗ್ರಹ' ವೆಂಬ ಗ್ರಂಥ ಇದುವರೆಗೆ ದೊರೆತಿಲ್ಲ.

ಮಹಾಪುರಾಣದ ತಿರುಳು

ಮೇಲೆ ಹೇಳಿದ ಆಚಾರ್ಯದ್ವಯರಿಂದ ರಚನೆಯಾದ ಮಹಾಪುರಾಣದಲ್ಲಿ ಪ್ರಮುಖವಾಗಿ ಪ್ರಥಮ ತೀರ್ಥಂಕರನಾದ ಆದಿನಾಥನ ಚರಿತ್ರೆ ಇರುವ 'ಪೂರ್ವ ಪುರಾಣ'ವನ್ನು ಭಗವದ್ ಜಿನಸೇನಾಚಾರ್ಯರು ರಚಿಸಿದ್ದು ಈ ಭಾಗವು ಜೈನಸಾಹಿತ್ಯದಲ್ಲೊಂದು ಅಪೂರ್ವ ಗ್ರಂಥವಾಗಿದ್ದು ಇದು ಕೇವಲ ಪುರಾಣ ಕಾವ್ಯವಾಗಿರದೇ ಆಚಾರ್ಯರು ಆದಿನಾಥ, ಆತನ ಪುತ್ರ ಪ್ರಥಮ ಚಕ್ರವರ್ತಿ ಭರತ, ಪ್ರಥಮ ಕಾಮದೇವ ಬಾಹುಬಲಿಯ ಚರಿತ್ರೆಯ ವಿವರಗಳ ಜೊತೆಯಲ್ಲಿ ಜೈನಾಗಮದ ನಾಲ್ಕು ಅನುಯೋಗಗಳನ್ನು ವಿಶದವಾಗಿ ಸಂಗ್ರಹಿಸಿದ್ದಾರೆ. ಜೈನ ಧರ್ಮದ ಎಲ್ಲ ಮಾನ್ಯ ತತ್ವಗಳು ಇಲ್ಲಿ ಅನೇಕ ಕಥಾಮಾಧ್ಯಮದ ಮೂಲಕ ಹೇಳಲ್ಪಟ್ಟಿವೆ. ಮುಂದೆ ಬಂದ ಕವಿಗಳು, ಆಚಾರ್ಯರು, ಇದನ್ನು ಮಹಾಕಾವ್ಯವೆಂದು ಸ್ವೀಕರಿಸಿದ್ದಾರೆ. ಇದು ಶೃಂಗಾರಾದಿಗಳಿಂದ ಕೂಡಿದ್ದು ತನ್ನ ಪದಲಾಲಿತ್ಯ, ಅರ್ಥಸೌಷ್ಠವ, ಸರಳತೆ, ಗಂಭೀರತೆ ಹಾಗೂ ಕೋಮಲತೆಗೆ ಹೆಸರಾಗಿದ್ದು ಸಂಪೂರ್ಣ ಕಾವ್ಯಗುಣಗಳನ್ನು ಹೊಂದಿದೆ. ಇಲ್ಲಿ ಜಿನಸೇನಾಚಾರ್ಯರ ಪ್ರತಿಭೆ ಹಾಗೂ ಕಲ್ಪನಾಶಕ್ತಿ ಅದ್ಭುತವಾಗಿದೆ.

ಪೂರ್ವಪುರಾಣದ ಉಳಿದ ಭಾಗವನ್ನು ಹಾಗೂ 'ಉತ್ತರ ಪುರಾಣ'ದ ೩೦ ಪರ್ವಗಳಲ್ಲಿ ಗುಣಭದ್ರಾಚಾರ್ಯರು ಉಳಿದ ೨೩ ತೀರ್ಥಂಕರರ ಜೊತೆಯಲ್ಲಿ ಆಯಾ ತೀರ್ಥಂಕರರುಗಳ ಕಾಲದಲ್ಲಿದ್ದ ಮಹಾಪುರುಷರ ಸಾಧನೆಗಳ ವಿವರಣೆಯನ್ನು ನೀಡಿದ್ದಾರೆ. ಅವರಲ್ಲಿ ತ್ರಿಷಷ್ಟಿಶಲಾಕಾ ಪುರುಷರಲ್ಲಿ

ಸ್ಥಾನ ಪಡೆದಿರುವ ಇನ್ನುಳಿದ ೧೧ ಚಕ್ರವರ್ತಿಗಳು, ೯ ಜನ ನಾರಾಯಣರು, ೯ ಜನ ಪ್ರತಿನಾರಾಯಣರು ಹಾಗೂ ೯ ಜನ ಬಲಭದ್ರರು ಸೇರಿದ್ದಾರೆ. ಒಟ್ಟು ೭೭ ಪರ್ವಗಳಲ್ಲಿ ೨೦,೦೦೦ ಶ್ಲೋಕಗಳಿಂದ ಕೂಡಿರುವ 'ಮಹಾಪುರಾಣ'ವು ಭಾರತೀಯ ಜನಜೀವನದ ಒಂದು ವಿಶ್ವಕೋಶವಾಗಿದೆ. ಕ್ರಿ.ಶ. ೯ನೇ ಶತಮಾನದ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ಈ ಕಾವ್ಯದಿಂದ ತಿಳಿಯಬಹುದಾಗಿದೆ.

ಮಹಾಪುರಾಣವು ಪ್ರಧಾನವಾಗಿ "ವಿಷಯ ವಾಸನೆಗಳನ್ನು ತೊರೆದು ಸಮಸ್ತ ಭೋಗಗಳಿಂದ ವಿರಕ್ತವಾಗಿ ಸತ್ಯವನ್ನು ಅರಿಯಲು ಆತ್ಮ ಸಂಯಮದ ಉಚ್ಚ ಭಾವನೆಗಳನ್ನು ಅನುಭವಿಸಲು ವೈರಾಗ್ಯ ಭಾವನೆ ತಾಳುವುದು ಅನಿವಾರ್ಯ" ಎಂಬ ವಾಸ್ತವಿಕತೆಯನ್ನು ತಿಳಿಸುವ ಮಹಾನ್ ಗ್ರಂಥವಾಗಿದ್ದು ಜೀವನದ ನಶ್ವರತೆಯನ್ನು, ಅಸ್ಥಿರತೆಯನ್ನು ಕಂಡುಕೊಂಡ ಮಹಾಪುರುಷರು ಬಾಹ್ಯನಿಮಿತ್ತ ಹಾಗೂ ಅಂತರಂಗದ ಉಪಾದಾನ ಉದಯವಾದಾಗ ವೈರಾಗ್ಯ ಮಾರ್ಗವನ್ನು ಆರಿಸಿಕೊಂಡು ದೀಕ್ಷೆಯನ್ನು ಪಡೆದು ರತ್ನತ್ರಯ ಮಾರ್ಗದಲ್ಲಿ ಸಾಗಿ ಮುಕ್ತಿ ಪಡೆದವರ ಯಶೋಗೀತೆಯನ್ನು ದಾಖಲಿಸಿದೆ.

ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಎಂಬ ಕಾಲವಿಭಾಗಗಳಲ್ಲಿ ಈಗ ಅವಸರ್ಪಿಣಿ ಎಂಬ ಕಾಲದಲ್ಲಿ ತ್ಯಾಗ-ವೈರಾಗ್ಯ ಜೀವನಕ್ಕೆ ಅವಕಾಶವಿದ್ದು ಮನುಷ್ಯ ಪರ್ಯಾಯವನ್ನು ಪಡೆದ ಜೀವ ವ್ರತಿಕನಾಗಿ ವೈರಾಗ್ಯ ಜೀವನದಲ್ಲಿ ಪಾದಾರ್ಪಣೆ ಮಾಡಲು ಸಾಧ್ಯವಾಯಿತು. ಈ ವೈರಾಗ್ಯ ಜೀವನವನ್ನು ಪ್ರವೇಶಿಸಲು ಬಾಹ್ಯ ನಿಮಿತ್ತಗಳು ಕಾರಣವಾಗಿ ಜೀವನದ ನಶ್ವರತೆಯನ್ನು ಕ್ಷಣಿಕತೆಯನ್ನು ಅರಿತ ಮಾನವ ಶಾಶ್ವತ ಸುಖವನ್ನು ಪಡೆಯಲು ಹಾತೊರೆದನು. ಈ ಕಾರಣದಿಂದ ಆತನಿಗೆ ಮರಣ, ಉಲ್ಕಾಪಾತ, ಋತುಗಳ ಪರಿವರ್ತನೆ, ಮಂಜು ಕರಗುವಿಕೆ, ನರೆಗೂದಲು, ಮೋಡಗಳ ಕರಗುವಿಕೆ, ಧರ್ಮ ಬೋಧನೆ, ಸ್ವಯಂಪ್ರಜ್ಞೆ ಹೀಗೆ ಹಲವಾರು ಕಾರಣಗಳು ಬಾಹ್ಯನಿಮಿತ್ತಗಳು ವೈರಾಗ್ಯಕ್ಕೆ ಕಾರಣವಾದವು.

ಮಹಾಪುರಾಣವು ಇಂತಹ ಬಾಹ್ಯ ನಿಮಿತ್ತಗಳಿಂದ ಪ್ರಭಾವಿತರಾಗಿ, ತಮ್ಮ ಅಂತರಂಗದಲ್ಲಿ ಉದಯಿಸಿದ ಉಪಾದಾನದಿಂದ ಪ್ರೇರಿತರಾಗಿ, ವೈರಾಗ್ಯ ಭಾವನೆಯನ್ನು ಹೊಂದಿ ಮುನಿದೀಕ್ಷೆಯನ್ನು ಪಡೆದು ರತ್ನತ್ರಯ ಮಾರ್ಗದಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟು ಮೋಕ್ಷಸಾಧನೆ ಮಾಡಿರುವವರ ಜೀವನ ಸಾಧನೆಗಳನ್ನು ಒಳಗೊಂಡಿದೆ.

ಅವಸರ್ಪಿಣಿ ಯುಗದ ಚತುರ್ಥಕಾಲ ಕರ್ಮಭೂಮಿಯ ಕಾಲವಾಗಿದ್ದು ಈ ಕಾಲದಲ್ಲಿ ಜೀವ (ಆತ್ಮ) ತನಗಂಟಿದ ಕರ್ಮವನ್ನು ನಾಶ ಮಾಡಿಕೊಳ್ಳಲು ತ್ಯಾಗ ಮಾರ್ಗವನ್ನು ಅನುಸರಿಸುವ ಅವಕಾಶ ಪಡೆದಿದೆ. ಇಂತಹ ಮಾರ್ಗವನ್ನು ತೋರಿದ ಪ್ರಥಮ ಮಹಾಪುರುಷ ವೃಷಭದೇವನಾದ್ದರಿಂದ ಆತನನ್ನು 'ಆದಿನಾಥ' ಎಂದು ಕರೆಯಲಾಗಿದೆ. ಅಸಿ, ಮಸಿ, ಕೃಷಿ, ವಾಣಿಜ್ಯ, ವಿದ್ಯೆ ಮತ್ತು ಶಿಲ್ಪ ಎಂಬ ಷಟ್ಕರ್ಮಗಳನ್ನು ತೋರಿಸಿಕೊಟ್ಟು ಜನರಿಗೆ ಜೀವನಮಾರ್ಗವನ್ನು ಕಲಿಸಿದ ಆದಿನಾಥರು ಈ ಷಟ್ಕರ್ಮಗಳಲ್ಲಿಯೇ 'ಜೀವ' ತನ್ಮಯನಾಗದೇ ಮುಕ್ತಿಮಾರ್ಗದಲ್ಲಿ ಸಾಗಬೇಕೆನ್ನುವ ದೃಷ್ಟಿಯಿಂದ ವಸ್ತುಗಳ ಯಥಾರ್ಥ ಸ್ವರೂಪವನ್ನು ತಿಳಿಸಿ ವೈರಾಗ್ಯ ಮಾರ್ಗವನ್ನು ತೋರಿಸಿ ಮುನಿದೀಕ್ಷೆಯನ್ನು ಹೊಂದಿ ಮುನಿಧರ್ಮದ ಪಾಲನೆಯ ವಿಧಿ ವಿಧಾನವನ್ನು ತೋರಿದರು. ವ್ಯವಹಾರ ಮತ್ತು ನಿಶ್ಚಯ, ಭೋಗ ಮತ್ತು ತ್ಯಾಗಗಳ ಸುಂದರ ಸಮನ್ವಯವನ್ನು ಪೂರ್ವ ಪುರಾಣದ ಆದಿನಾಥರ ಜೀವನ ಚರಿತ್ರೆಯಲ್ಲಿ ಕಾಣಬಹುದಾಗಿದೆ.

ಇಂದ್ರಲೋಕದ ನರ್ತಕಿ ನೀಲಾಂಜನೆಯ ಸಾವು ಬದುಕಿನ ಅಸಾರತೆ ಹಾಗೂ ನಶ್ವರತೆಯನ್ನು ತೋರಿಸಿದಾಗ ಆದಿನಾಥರ ಬದುಕಿಗೆ ಒಂದು ತಿರುವು ದೊರೆತದ್ದನ್ನು ಜಿನಸೇನಾಚಾರ್ಯರು ಆದಿನಾಥರ ಮೂಲಕ ಜೀವನ ದರ್ಶನವನ್ನು ಹೇಳಿದ್ದಾರೆ-"ಜಗತ್ತು ನಾಶ ಸ್ವಭಾವವುಳ್ಳದು. ಸಂಪತ್ತು ಮಿಂಚಿನಂತೆ ಚಂಚಲವಾಗಿದೆ, ಯೌವನವೂ ಶರೀರವೂ, ಆರೋಗ್ಯವೂ, ಐಶ್ವರ್ಯವೂ ಅತ್ಯಂತ ಚಂಚಲಮಯವಾಗಿವೆ. ರೂಪ, ಯೌವನ, ಸೌಭಾಗ್ಯ

ಇವುಗಳಿಂದ ಮದೋನ್ಮತ್ತರಾದ ಅವಿವೇಕಿಗಳು ಈ ವಸ್ತುಗಳೆಲ್ಲಾ ಸ್ಥಿರವಾದವುಗಳೆಂದು ತಿಳಿಯುತ್ತಾರೆ. ಈ ಲೋಕದಲ್ಲಿ ನಾಶವಾಗದಿರುವ ವಸ್ತು ಯಾವುದು ?" ಎಂದು ಪ್ರಶ್ನಿಸಿದ ಆದಿನಾಥರು "ಜೀವನಿಗೆ ಜನ್ಮವು ದುಃಖಕರವಾದದ್ದು. ಅದಕ್ಕಿಂತ ದುಃಖಕರವಾದದ್ದು ಮುಪ್ಪು, ಅದಕ್ಕಿಂತಲೂ ಹೆಚ್ಚು ದುಃಖಕರವಾದದ್ದು ಮರಣ" ಎಂದು ಹೇಳುತ್ತಾ, "ಮನುಷ್ಯರಿಗೆ ಪರಸೇವೆ, ಬಡತನ, ಚಿಂತೆ, ಶೋಕ ಮುಂತಾದವುಗಳಿಂದ ಆಗುವ ದುಃಖವು ಪ್ರತ್ಯಕ್ಷ ನರಕದಂತೆ ಎಂದು ಭಾವಿಸಿ ವೈರಾಗ್ಯಭಾವವನ್ನು ತಾಳಿ, 'ಈ ರೂಪಕ್ಕೆ ಧಿಕ್ಕಾರವಿರಲಿ, ಅಸಾರವಾದ ಸಂಸಾರಕ್ಕೂ ಧಿಕ್ಕಾರವಿರಲಿ, ಈ ರಾಜಭೋಗಕ್ಕೂ ಧಿಕ್ಕಾರವಿರಲಿ, ಮಿಂಚಿನಂತೆ ಚಂಚಲವಾದ ಈ ಸಂಪತ್ತಿಗೂ ಧಿಕ್ಕಾರವಿರಲಿ" ಎಂದು ಮುಕ್ತಿಗೋಸ್ಕರ ಉದ್ಯುಕ್ತರಾದರು.

ಹೀಗೆ ಪ್ರಥಮ ತೀರ್ಥಂಕರ ಸಾಗಿದ ವೈರಾಗ್ಯಮಾರ್ಗ ಮುಂದೆ ಭರತ ಚಕ್ರವರ್ತಿ ಆರು ಖಂಡಗಳನ್ನು ಜಯಿಸಿ, ತನ್ನ ಸಹೋದರರು ಶರಣಾಗತರಾಗುವಂತೆ ಮಾಡಲು ಪ್ರಯತ್ನಿಸಿದಾಗ, ಅದು, ಆತನ ೯೯ ಜನ ಸಹೋದರರಿಗೆ ಮೋಕ್ಷದ ರಾಜಮಾರ್ಗವಾಗಿ ತೋರಿತು. ಆತ್ಮಾಭಿಮಾನಿಯಾದ ಬಾಹುಬಲಿ ಧರ್ಮಮಾರ್ಗದಿಂದ ಭರತ ಚಕ್ರವರ್ತಿಯ ಮೇಲೆ ವಿಜಯ ಸಾಧಿಸಿದರೂ, ಭರತ ಬಾಹುಬಲಿಯ ಮೇಲೆ ಚಕ್ರರತ್ನ ಬಿಟ್ಟಾಗ, 'ನಾಶಶೀಲವಾದ ರಾಜ್ಯಕ್ಕೋಸ್ಕರ ತನ್ನ ಅಣ್ಣನಿಂದ ಲಜ್ಜಾಕರವಾದ ಈ ಕಾರ್ಯ ಜರುಗಿತಲ್ಲ" ಎಂದು ಯೋಚಿಸಿದ ಬಾಹುಬಲಿ ಎಲ್ಲವನ್ನು ತ್ಯಾಗ ಮಾಡಿ 'ತ್ಯಾಗವೀರ'ನಾದ, ಕೇವಲಿಯಾಗಿ ಮುಕ್ತಿ ಪಡೆದ. "ಅಹಿಂಸೆಯಿಂದ ಸುಖ, ತ್ಯಾಗದಿಂದ ಶಾಂತಿ" ಎಂಬ ಸಂದೇಶವನ್ನು ಜಗತ್ತಿಗೆ ನೀಡಿ ನಿಶಸ್ತ್ರೀಕರಣದ ಹರಿಕಾರನಾದ.

ಇದೇ ಮಾರ್ಗವನ್ನು ಅನುಸರಿಸಿದ ಬಾಹುಬಲಿಯ ಸಹೋದರಿ ಬ್ರಾಹ್ಮಿ, ಸೋಮಪ್ರಭ, ಅಕಂಪನ, ಹಿರಣ್ಯವರ್ಮ, ಗುಣಪಾಲ, ಶ್ರೀಪಾಲ ಎಂಬ ರಾಜ ಮಹಾರಾಜರು, ಜಯಕುಮಾರನೆಂಬ ಸೇನಾಧಿಪತಿ, ಅಂತಿಮವಾಗಿ

ಆರು ಖಂಡಗಳ ಒಡೆಯನಾದ ಭರತ ಚಕ್ರವರ್ತಿ ಮುಂತಾದವರ ವೈರಾಗ್ಯ ಪ್ರಸಂಗಗಳು ಪೂರ್ವಪುರಾಣದಲ್ಲಿ ಬಹು ಮಾರ್ಮಿಕವಾಗಿ ಚಿತ್ರಿಸಲ್ಪಟ್ಟಿದೆ.

ಈ ಮಹಾನುಭಾವರು ಅನುಸರಿಸಿದ ಮಾರ್ಗ ಮುಂದೆ ಬಂದ ಉಳಿದ ೨೩ ತೀರ್ಥಂಕರರಿಗೂ, ಅವರ ಕಾಲದಲ್ಲಿ ಆಗಿಹೋದ ಮಹಾಪುರುಷರಿಗೂ ಮಾರ್ಗದರ್ಶಿಯಾಗಿದೆ. ಅವರುಗಳು ವೈರಾಗ್ಯಭಾವನೆ ತಾಳಲು ಕಾರಣವಾದ ಸನ್ನಿವೇಶಗಳನ್ನು ಮಹಾಪುರಾಣದ ಉತ್ತರಭಾಗವು ಸಂಕ್ಷಿಪ್ತವಾದ ಆದರೆ ಅರ್ಥಗರ್ಭಿತವಾದ ವಿವರಣೆಗಳನ್ನು ನೀಡಿದೆ.

ಪೂರ್ವ ಪುರಾಣದಲ್ಲಿ ಆದಿಜಿನನ ತೀರ್ಥಕಾಲದಲ್ಲಿ ಆಗಿಹೋದ ಅನೇಕ ವಿರಾಗಿಗಳ ಚಿತ್ರಣವನ್ನು ನೀಡಿದ ಜಿನಸೇನಾಚಾರ್ಯರು ೪೨ ಪರ್ವಗಳನ್ನು ರಚಿಸಿ ಸ್ವರ್ಗಸ್ಥರಾದಾಗ ಅವರ ಪುರಾಣಶೈಲಿಗೆ ಧಕ್ಕೆ ಬಾರದಂತೆ ಪುರಾಣ ರಚನೆಯನ್ನು ಮುಂದುವರೆಸಿದ ಗುಣಭದ್ರಾಚಾರ್ಯರು ೪೩ನೇ ಪರ್ವದಿಂದ ಆದಿಜಿನನ ಸಮಯದಲ್ಲಿ ಆಗಿಹೋದ ಮಹಾನ್ ಪುರುಷರ ವೈರಾಗ್ಯ ಸಾಧನೆಯನ್ನು ದಾಖಲಿಸಿ, ೪೮ನೇ ಪರ್ವದಿಂದ ಉತ್ತರ ಪುರಾಣವನ್ನು ಪ್ರಾರಂಭಿಸಿ, ಅಜಿತ ತೀರ್ಥಂಕರರ ಕಾಲದಿಂದ ವೈರಾಗ್ಯ ಭಾವನೆ ತಾಳಿ ಮುಕ್ತಿಮಾರ್ಗದಲ್ಲಿ ಸಾಗಿ ಶಾಶ್ವತ ಪದವಿ ಪಡೆದವರ ಜೀವನ ಚರಿತ್ರೆಯನ್ನು ಮೂಲಕ್ಕೆ ಧಕ್ಕೆ ಬಾರದಂತೆ ಪೂರೈಸಿದ್ದಾರೆ.

ಸಮ್ಯಗ್‌ದರ್ಶನ, ಸಮ್ಯಗ್ ಜ್ಞಾನ, ಸಮ್ಯಗ್ ಚಾರಿತ್ರಗಳಿಂದ ರತ್ನತ್ರಯ ಮಾರ್ಗವನ್ನು ತೋರಿರುವ ಪ್ರಥಮಾನುಯೋಗದ ಗ್ರಂಥಗಳಲ್ಲಿ 'ಮಹಾಪುರಾಣ' ಅಗ್ರಸ್ಥಾನವನ್ನು ಅಲಂಕರಿಸಿದೆ. ಭವ್ಯ ಜೀವಿಗಳನ್ನು ಮುಕ್ತಿಮಾರ್ಗದ ಕಡೆಗೆ ಕರೆದೊಯ್ಯುವ ಗ್ರಂಥ 'ಮಹಾಪುರಾಣ' ಜೈನಧರ್ಮದ ಮೂಲ ಗುರಿ ಮೋಕ್ಷ ಸಾಧನೆ. ಈ ಮೋಕ್ಷ ಸಾಧನೆಯ ಮಾರ್ಗದಲ್ಲಿ ನಡೆಸಿದ ಪುರುಷಾರ್ಥಗಳನ್ನು ಈ ಮಹಾನ್ ಗ್ರಂಥದಲ್ಲಿ ವರ್ಣನೆ ಮಾಡಿರುವ ಆಚಾರ್ಯದ್ವಯರು ಅಸಂಖ್ಯಾತ ವಿಷಯಗಳನ್ನು ವರ್ಣಿಸಿದ್ದಾರೆ. ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ಹೇಳುವಂತೆ-

"ಮಹಾಪುರಾಣವು ಮಹಾಸಾಗರದಂತೆ, ಅಲ್ಲಿ ಅಮೂಲ್ಯ ಮುತ್ತು ರತ್ನಗಳಿರುವಂತೆ ಇಲ್ಲಿ 'ರತ್ನತ್ರಯ'ಗಳ ವರ್ಣನೆ ಇದೆ. ವಿಚಾರಗಳ ಪ್ರತಿಪಾದನೆಯಲ್ಲಿ ಅಗಾಧತೆ ಇದೆ. ಸ್ವರ್ಗ-ನರಕ, ಮಂತ್ರ-ತಂತ್ರ, ಪೂಜೆ, ವೈರಾಗ್ಯ, ಸನ್ಯಾಸ, ತಪಸ್ಸು ಧ್ಯಾನ, ಯೋಗ, ಕರ್ಮಸಿದ್ಧಾಂತ, ಪುನರ್ಜನ್ಮ, ಮೋಕ್ಷ, ಹಿಂಸೆ-ಅಹಿಂಸೆ, ವ್ಯಾಕರಣ-ಛಂದಸ್ಸು-ಕಾವ್ಯ, ತರ್ಕ-ನ್ಯಾಯ-ನೀತಿ, ಜ್ಞಾನ ಮೀಮಾಂಸೆ, ರಾಜನೀತಿ, ಯುದ್ಧನೀತಿ, ಅಸ್ತ್ರ-ಶಸ್ತ್ರ, ಸಮತಾವಾದ, ಗಜಶಾಸ್ತ್ರ, ವ್ಯಾಪಾರ, ವಿದೇಶನೀತಿ, ಭೂಗೋಳ, ನಗರರಚನೆ ಗ್ರಹ-ನಕ್ಷತ್ರ-ಜ್ಯೋತಿಷ್ಯ, ವನಸ್ಪತಿ, ವಿಜ್ಞಾನ, ವೃಕ್ಷ-ಫಲ-ಪುಷ್ಪ, ಆಯುರ್ವೇದ, ಧಾತುವಿಜ್ಞಾನ, ನವರತ್ನ, ಕೃಷಿ, ದ್ವೀಪ, ಸಮುದ್ರನೃತ್ಯ, ವಾಸ್ತುಸಾರ, ಕಲೆ, ಸಂಗೀತ, ನೃತ್ಯ, ಸ್ತ್ರೀ, ವಸ್ತ್ರವಿನ್ಯಾಸ, ಕೇಶ ವಿನ್ಯಾಸ, ಶಾರೀರಕ ಲಕ್ಷಣ, ಕುಟುಂಬ ನೀತಿ, ಸಮಾಜ ನೀತಿ, ಕಾಮಶಾಸ್ತ್ರ, ಮಾತೃವಾತ್ಸಲ್ಯ, ಪಿತೃಭಕ್ತಿ, ಗುರುಭಕ್ತಿ ಇತ್ಯಾದಿ ವಿಷಯಗಳನ್ನು ಅಧ್ಯಯನ ಮಾಡಲು ಇಲ್ಲಿ ವಿಪುಲ ಸಾಮಗ್ರಿ ದೊರೆಯುತ್ತದೆ" ಎಂದು ಹೇಳಿರುವುದರಲ್ಲಿ ಅತಿಶಯೋಕ್ತಿ ಇಲ್ಲ.

ಈ ಮಹಾನ್ ಗ್ರಂಥವನ್ನು ಸಂಸ್ಕೃತದಿಂದ ಕನ್ನಡಕ್ಕೆ ತರ್ಜುಮೆ ಮಾಡಿರುವ ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳು, "ಇಪ್ಪತ್ತು ನಾಲ್ಕು ಮಂದಿ ತೀರ್ಥಂಕರರೂ, ಹನ್ನೆರಡು ಮಂದಿ ಚಕ್ರವರ್ತಿಗಳು, ಒಂಬತ್ತು ಮಂದಿ ಬಲಭದ್ರರೂ, ಒಂಬತ್ತು ಮಂದಿ ನಾರಾಯಣರು, ಒಂಬತ್ತು ಮಂದಿ ಪ್ರತಿನಾರಾಯಣರು ಸೇರಿ ಅರವತ್ತುಮೂರು ಮಂದಿ ಪ್ರಸಿದ್ಧ ಪುರುಷರ ಚರಿತ್ರೆಯನ್ನು ಪ್ರತಿಪಾದಿಸಿರುವುದರಿಂದ ಈ ಗ್ರಂಥಕ್ಕೆ 'ಮಹಾಪುರಾಣ'ವೆಂದು ಹೆಸರು ಬಂದಿದೆ. ಕವಿತಾ ಚಾತುರ್ಯ, ಅರ್ಥಗಾಂಭೀರ್ಯ, ಪದಲಾಲಿತ್ಯ, ರಸಾಲಂಕಾರ, ಸೌಷ್ಠವ ಮೊದಲಾದ ಕಾವ್ಯಗುಣಗಳಿಂದ ಜೈನಪುರಾಣ ಗ್ರಂಥಗಳೆಲ್ಲೆಲ್ಲ ಇದು ಅದ್ವಿತೀಯವಾದುದು. ಇದರಲ್ಲಿ ಮಹಾಕಾವ್ಯದ ಲಕ್ಷಣಗಳೆಲ್ಲವೂ ತುಂಬಿ ತುಳುಕುತ್ತಿವೆ. ನೀತಿಬೋಧೆ, ವೈರಾಗ್ಯ, ತತ್ವವಿಚಾರ, ಸಂಸಾರ ಸ್ವರೂಪ, ಮುಕ್ತಿ ಸ್ವರೂಪ, ಕರ್ಮಸ್ವರೂಪ, ಲೋಕ ಸ್ವರೂಪ ಮೊದಲಾದ ವಿಷಯಗಳು ಬಹಳ ಚೆನ್ನಾಗಿ ನಿರೂಪಿಸಲ್ಪಟ್ಟಿವೆ" ಎಂದಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ದೇ. ಜವರೇಗೌಡರು, "ಮಹಾಪುರಾಣವು ರಾಮಾಯಣ, ಮಹಾಭಾರತ, ಭಾಗವತ, ಬೃಹತ್ ಕಥಾಕೋಶಗಳಂತೆ ಕವಿಗಳ ಕಲ್ಪತರುವಾಗಿದೆ, ಕೈವೊಕ್ಕ ನಿಧಿಯಾಗಿದೆ. ಭಾರತೀಯ ಭಾಷಾ ಸಾಹಿತ್ಯಗಳ ಅಕ್ಷಯ ಭಂಡಾರವಾಗಿದೆ. ಅದರಿಂದ ನಿರಂತರ ಸ್ಫೂರ್ತಿ, ಪ್ರೇರಣೆ, ಸತ್ವಗಳನ್ನು ಪಡೆಯದ ದೇಶಭಾಷೆಯೇ ಇಲ್ಲಾ. ಭಾರತೀಯ ಸಂಸ್ಕೃತಿಯ ವಿಕಾಸದಲ್ಲಿ, ಆದರ ಶ್ರೀಮಂತಿಕೆಯ ಮತ್ತು ವೈಭವೋನ್ನತಿಯ ಸಾಧನೆಯಲ್ಲಿ ಈ ಅಮರಕೃತಿಯ ಪಾತ್ರ ಅಸಾಮಾನ್ಯವಾದದ್ದು, ಇದು ತೀರ್ಥಂಕರರ ಅವತಾರ ರೀತಿಯ ಮತ್ತು ನಿತ್ಯಾವಾಸದ ಕ್ಷೇತ್ರವಾಗಿದ್ದು ಸಾಧು, ಸಂತರ, ಸಾಧಕರ ಹಾಗೂ ಭಾವುಕರ ಅಪೂರ್ವ ಅವಿನಾಶಿ ಯಾತ್ರಾ ಕೇಂದ್ರವಾಗಿದೆ" ಎಂದಿದ್ದಾರೆ.

ಮಹಾಪುರಾಣದ ರಚನೆಗೆ ಆಚಾರ್ಯದ್ವಯರಿಗೆ ಸಹಕಾರಿಯಾದ ಮೂಲಕೃತಿ ಕವಿಪರಮಮೇಷ್ಠಿ ರಚಿಸಿದ "ವಾಗರ್ಥ ಸಂಗ್ರಹ". ಆದರೆ ಈ ಕೃತಿ ಸಧ್ಯ ಲಭ್ಯವಿಲ್ಲಾ. ಕೂಚಿಭಟ್ಟಾರಕ ಮೊದಲಾದವರು ಈ ಪುರಾಣ ಪುರುಷರ ಜೀವನ ಚರಿತ್ರೆಗಳನ್ನು ರಚಿಸಿದ್ದರೆಂದು ತಿಳಿದು ಬಂದರೂ ಆ ಕೃತಿಗಳು ಲಭ್ಯವಿಲ್ಲಾ, ಈ ಆಚಾರ್ಯದ್ವಯರ ಮಹಾಪುರಾಣವನ್ನೆ ಆಧರಿಸಿ ಬರೆದ 'ಚಾವುಂಡರಾಯ ಪುರಾಣ'ದಲ್ಲಿ ಕವಿ ಪರಮೇಷ್ಠಿಯ ಕೆಲವು ಪದ್ಯಗಳು ಉಲ್ಲೇಖಿತವಾಗಿವೆ. ಆದ್ದರಿಂದ ೧೦ನೇ ಶತಮಾನದ ಅನಂತರ ರಚಿಸಿದ ಭಾರತೀಯ ಭಾಷೆಗಳಲ್ಲಿರುವ ಜೈನಪುರಾಣ ಕೃತಿಗಳಿಗೆಲ್ಲಾ ಈ ಮಹಾಪುರಾಣ ಮೂಲ ಮಾತೃಕೆಯಾಗಿದೆ. ಕನ್ನಡ ಸಾಹಿತ್ಯ, ಸಾಹಿತಿಗಳ ಮೇಲೆ ಇದು ಬೀರಿದ ಪ್ರಭಾವವನ್ನು ಗುರುತಿಸುತ್ತಾ, ಕನ್ನಡ ಸಾಹಿತ್ಯ ಪರಿಷತ್ತಿನ ವಿಶ್ರಾಂತ ಅಧ್ಯಕ್ಷ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಡಾ. ಹಂಪ ನಾಗರಾಜಯ್ಯ ಅವರು "ಮಹಾಪುರಾಣ ಕನ್ನಡ ಜೈನ ಕವಿಗಳಿಗೆ ತಾಯಿಬೇರು, ತಲಕಾವೇರಿ, ಪಂಪ, ಪೊನ್ನ, ಜನ್ನ, ರನ್ನರಾದಿಯಾಗಿ ಉಳಿದ ಅನೇಕ ಕನ್ನಡ ಕವಿಗಳು ಇದರಲ್ಲಿ ಕ್ರೀಡಿಸಿದ್ದಾರೆ. ಈ ಕನ್ನಡ ಕವಿಗಳ ಋಣಭಾರದಿಂದ ಮಹಾಪುರಾಣ ಜಗ್ಗಿಲ್ಲಾ, ಅದು ಮೊಗೆ ಮೊಗೆದಷ್ಟೂ

ಮುಗಿಯದ ಅಕ್ಷಯ ಕಾವ್ಯ. ಮಹಾಪುರಾಣ ಕಾವ್ಯಕ್ಕೆ ಕಾವ್ಯ, ಪುರಾಣಕ್ಕೆ ಪುರಾಣ, ಅದರ ಉದ್ದಕ್ಕೂ ಧರ್ಮಪ್ರಧಾನವಾಗಿದ್ದು ಕಾವ್ಯ ಆನುಷಂಗಿಕವಾಗಿ ಬರುತ್ತದೆಯಾದರೂ ಅಲ್ಲಲ್ಲಿ ಕಾವ್ಯ ಪ್ರಮುಖವಾಗಿ ಧರ್ಮಗೌಣವಾದ ರಸಾರ್ದ್ರ ಭಾಗಗಳು ಇವೆ" ಎಂದಿದ್ದಾರೆ. ಹೀಗೆ 'ಮಹಾಪುರಾಣ' ಸಾಹಿತ್ಯ ಕ್ಷೇತ್ರದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ.

### ಮಹಾಪುರಾಣದ ಕನ್ನಡಾನುವಾದ

ಕರ್ನಾಟಕದ ಆಚಾರ್ಯದ್ವಯರಿಂದ ಸಂಸ್ಕೃತದಲ್ಲಿ ರಚನೆಯಾದ ಈ ಮಹಾನ್ ಗ್ರಂಥದ ಪೂರ್ಣ ಪರಿಚಯ ಸಮಸ್ತ ಕನ್ನಡಿಗರಿಗೆ ದೊರೆಯಲು ೧೧ ಶತಮಾನಗಳಷ್ಟು ಸಮಯ ಬೇಕಾದದ್ದು ಒಂದು ವಿಪರ್ಯಾಸವೇ ಸರಿ. ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಲು ಈ ಕೃತಿ ಕನ್ನಡಕ್ಕೆ ಬರುವಂತೆ ಮಾಡಿದ ಶ್ರೇಯಸ್ಸು ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಧರ್ಮಪೀಠಕ್ಕೆ ಸಲ್ಲುತ್ತದೆ. ಆ ಪೀಠವನ್ನು ಅಲಂಕರಿಸಿದ್ದ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರು ಶ್ರೀ ನೇಮಿಸಾಗರ ವರ್ಣಿಜೀಯವರಾಗಿದ್ದಾಗ ಅವರ ಪ್ರೇರಣೆ ಪಡೆದ ಎರ್ತೂರು ಶಾಂತಿರಾಜ ಶಾಸ್ತ್ರಿಗಳು ದೊಡ್ಡ ವಿದ್ವಾಂಸರಾದರು. ಮಹಾಪುರಾಣದ ಕನ್ನಡ ಅನುವಾದ ಕಾರ್ಯವನ್ನು ಪ್ರಾರಂಭಿಸಿ ಸುಮಾರು ೨೦-೨೨ ವರ್ಷಗಳ ಕಾಲ ಹಗಲಿರುಳೆನ್ನದೆ ಏಕಾಕಿಯಾಗಿ ಅವಿರತವಾಗಿ ಶಕ್ತಿಮೀರಿ ಶ್ರಮಿಸಿ ಕನ್ನಡ ಜನತೆಗೆ ತಮ್ಮ ತಪದ ಫಲವನ್ನು ಧಾರೆಯಾಗಿ ನೀಡಿದ್ದರ ಪರಿಣಾಮ 'ಮಹಾಪುರಾಣ' ಕನ್ನಡ ಭಾಷೆಗೆ ಅವತರಿಸಿತು.

ಮಹಾಪುರಾಣ ಎರಡು ಭಾಗಗಳಲ್ಲಿ ಪೂರ್ವ ಪುರಾಣದ ೪೨ ಪರ್ವಗಳುಳ್ಳ ಪೂರ್ವ ಭಾಗವನ್ನು ಫೆಬ್ರವರಿ ೧೯೨೫ರಲ್ಲಿ, ಉಳಿದ ೫ ಪರ್ವಗಳು ಸೇರಿದಂತೆ ಸಂಪೂರ್ಣ ಪೂರ್ವ ಪುರಾಣವನ್ನು ಫೆಬ್ರವರಿ ೧೯೩೩ರಲ್ಲಿಯೂ, ೩೦ ಪರ್ವಗಳುಳ್ಳ ಉತ್ತರ ಪುರಾಣವನ್ನು ಜನವರಿ ೧೯೪೦ ರಲ್ಲೂ ಒಟ್ಟು ಪೂರ್ವ ಮತ್ತು ಉತ್ತರ ಪುರಾಣವೆಂದು ಸಂಗ್ರಹಿಸಿದ ಮಹಾಪುರಾಣವನ್ನು ಪಾಠಾಂತರದೊಂದಿಗೆ ಸಂಪಾದಿಸಿ ಕೊಡುವುದರ

ಜೊತೆಗೆ ಪ್ರಪ್ರಥಮವಾಗಿ ಸರಳ ಗದ್ಯಾನುವಾದ ಮಾಡಿ ಪೂರೈಸಿದಾಗ, ಶ್ರೀ ಕ್ಷೇತ್ರ ಶ್ರವಣಬೆಳಗೊಳ ಧರ್ಮಪೀಠದ ಪರಮ ಪೂಜ್ಯ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಮ ಭಟ್ಟಾರಕ ಶ್ರೀ ನೇಮಿಸಾಗರ ವರ್ಣಿಜೀಯವರ ಪ್ರೇರಣೆ ಪಡೆದು, ಬಾಹುಬಲಿಯ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ, ಕೇರಳದ ವೈನಾಡಿನ ಕೀರ್ತಿಶೇಷರಾದ ಶ್ರೀಮಾನ್ ಮಣಿಯಂಗೋಡು ಕೃಷ್ಣಯ್ಯಗೌಡರು ಅವರ ಸುಪುತ್ರ ಶ್ರೀ ಎಂ.ಕೆ. ಸುಬ್ಬಯ್ಯಗೌಡರು ಉದಾರ ಧನಸಹಾಯ ಮಾಡಿದ್ದರಿಂದ ಮಹಾಪುರಾಣದ ಕನ್ನಡ ಅನುವಾದದ ಪ್ರಥಮ ಮುದ್ರಣ ಹೊರಬಂದಿತು.

ತಮ್ಮ ವಿದ್ವತ್ತೆಯಿಂದ ಖ್ಯಾತರಾದ ಎರ್ತೂರು ಶಾಂತಿರಾಜ ಶಾಸ್ತ್ರಿಗಳು ಮೈಸೂರು ಸಂಸ್ಥಾನದ ಆಸ್ಥಾನ ವಿದ್ವಾಂಸರಾಗಿ ನಾಡಿನ ಪ್ರಭುಗಳಾದ ಶ್ರೀ ಜಯಚಾಮರಾಜೇಂದ್ರ ಒಡೆಯರಿಂದ ೧೯೪೭ರಲ್ಲಿ 'ಪಂಡಿತರತ್ನ' ಎಂಬ ಪದವಿಯೊಂದಿಗೆ ಗೌರವಿಸಲ್ಪಟ್ಟರು. ೧೯೫೧ರಲ್ಲಿ ಕನ್ನಡಿಗರ ಪ್ರತಿನಿಧಿ ಸಂಸ್ಥೆಯಾದ 'ಕನ್ನಡ ಸಾಹಿತ್ಯ ಪರಿಷತ್ತು ಅವರ ಅಗಾಧ ಪಾಂಡಿತ್ಯವನ್ನು ಗುರುತಿಸಿ ಸನ್ಮಾನಪತ್ರ' ನೀಡಿ ಗೌರವಿಸಿತು.

೧೯೪೦ರಲ್ಲಿ ಪೂರ್ಣಪ್ರಮಾಣದಲ್ಲಿ ಎರಡು ಸಂಪುಟಗಳಲ್ಲಿ ಪ್ರಥಮ ಮುದ್ರಣ ಕಂಡ ಕನ್ನಡ ಮಹಾಪುರಾಣ ಬಹು ಬೇಗನೆ ಜನಪ್ರಿಯತೆ ಪಡೆದು ಅದರ ಪ್ರತಿಗಳು ಅಲಭ್ಯವಾದಾಗ, ಅದರ ಮರುಮುದ್ರಣದ ಪ್ರಯತ್ನಗಳು ಪ್ರಾರಂಭವಾದಾಗ, ಅದಕ್ಕೆ ಪ್ರತಿಫಲ ದೊರೆತದ್ದು ಮತ್ತೆ ೧೯೮೧ರಲ್ಲಿ, ಭಗವಾನ್ ಬಾಹುಬಲಿಯ ವಿಗ್ರಹದ ಸಹಸ್ರಮಾನೋತ್ಸವದ ಅಂಗವಾಗಿ ನಡೆದ ಮಹಾಮಸ್ತಕಾಭಿಷೇಕದ ಪೂರ್ವ ಸಿದ್ಧತೆಗಳು ನಡೆದಾಗ ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಹಂಪ ನಾಗರಾಜಯ್ಯನವರ ನಿರಂತರ ಪ್ರಯತ್ನದ ಪರಿಣಾಮ ಕರ್ನಾಟಕ ಸರಕಾರದ ಉದಾರ ಧನ ಸಹಾಯದಿಂದ ಈ ಮಹಾನ್ ಗ್ರಂಥ ನಾಲ್ಕು ಸಂಪುಟಗಳಲ್ಲಿ ಬೆಳಕಿಗೆ ಬಂದು ಕನ್ನಡಿಗರ ಕೈಸೇರಿತು.

ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್ ಮಹಾಪುರಾಣದ ಕನ್ನಡ ಆವೃತ್ತಿಯ ಮೂರನೆಯ ಮುದ್ರಣ ಕಾರ್ಯಕ್ಕಾಗಿ ಸುಮಾರು ಎರಡೂವರೆ ವರ್ಷಗಳ ಸಿದ್ಧತೆ ನಡೆಸಿ ೧೯೯೨ರಲ್ಲಿ ದ್ವಿವರ್ಣದಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸಿ ಎಲ್ಲರಿಗೂ ಮೆಚ್ಚುಗೆ ಆಗುವಂತೆ ಸುಮಾರು ೪೦ ಪುಟಗಳಷ್ಟು ವಿವಿಧ ವರ್ಣಚಿತ್ರಗಳೊಂದಿಗೆ ಮತ್ತು ಸಂಶೋಧನೆಗೆ ಸಹಾಯಕವಾಗುವ ಸುಮಾರು ೧೪೦ ಪುಟಗಳಷ್ಟು ಡಾ. ಎಂ.ಎ. ಜಯಚಂದ್ರರ ವಿವಿಧ ಸೂಚಿಗಳೊಂದಿಗೆ ರಾಯಲ್ ಆಕಾರದ ಎರಡು ಸಂಪುಟಗಳಲ್ಲಿ ಹೊರತಂದಿತು. ಅತ್ಯಂತ ಆಕರ್ಷಕವಾಗಿರುವ ಈ ಸಂಪುಟಗಳು ಕನ್ನಡಿಗರ ಕೈ ಸೇರಿ ವಿಪುಲವಾದ ಸಂಶೋಧನಾ ಅವಕಾಶವನ್ನು ಕಲ್ಪಿಸಿಕೊಟ್ಟಿವೆ. ನಿಜವಾಗಿಯೂ ಇದು ಕನ್ನಡಿಗರ ಸೌಭಾಗ್ಯವೇ ಸರಿ.

**ಮಹಾಪುರಾಣದ ಸೂಕ್ತಿಗಳು**

೧. ಸತ್ಪುರುಷನು ಲೋಕವನ್ನು ತನ್ನಂತೆ ಸುಜನವನ್ನಾಗಿ ಮಾಡಲು ಬಹುಕಾಲ ಪ್ರಯತ್ನ ಪಟ್ಟರು ಅವನು ಸಮರ್ಥನಲ್ಲವು. ದುಷ್ಟನಾದರೋ ಶೀಘ್ರವಾಗಿ ಲೋಕವನ್ನು ದುಷ್ಟನನ್ನಾಗಿ ಮಾಡುತ್ತಾನೆ. ಅದು ಆಶ್ಚರ್ಯವಾಗಿದೆ.

(ಪರ್ವ ೧. ಶ್ಲೋಕ ೯೦)

೨. ಹಿಂಸೆಯನ್ನು ಮಾಡದಿರುವಿಕೆಯೂ, ಸತ್ಯವನ್ನು ಮಾತನಾಡುವಿಕೆಯೂ ಕಳ್ಳತನವನ್ನು ಮಾಡದಿರುವಿಕೆಯೂ ಸ್ತ್ರೀ ವಿಷಯಾಸಕ್ತಿಯನ್ನು ಬಿಡುವಿಕೆಯೂ ಪರಿಗ್ರಹಗಳಲ್ಲದಿರುವಿಕೆಯೂ ಧರ್ಮಗಳೆಂದು ಅನಾದಿ ಕಾಲದಿಂದಲೂ ಹೇಳಲ್ಪಟ್ಟಿದೆ. (೫ : ೨೩)

೩. ಪ್ರಾಣೀ ಮಾತ್ರದಲ್ಲಿ ದಯೆಯನ್ನಿಡುವುದೂ, ಸತ್ಯವನ್ನು ಮಾತನಾಡುವುದೂ, ಕ್ಷಮೆಯೂ, ಶುಚಿಯೂ, ಭೋಗೋಪಭೋಗ ವಿಷಯಗಳಲ್ಲಿ ಆಸೆ ಇಲ್ಲದಿರುವಿಕೆಯೂ, ಜ್ಞಾನಾಭ್ಯಾಸವೂ, ಸಂಸಾರದಲ್ಲಿ ವೈರಾಗ್ಯ ಭಾವನೆಯೂ ಧರ್ಮವೆನಿಸುವುವು. ಇದಕ್ಕೆ ವಿಪರೀತವಾದ ನಿರ್ದಯೆ

ಮೊದಲಾದ ಗುಣಗಳು ಅಧರ್ಮಗಳೆನಿಸುವುವು. (೧೦-೧೫)

೪. ಸಮ್ಯಜ್ಞಾನವನ್ನು ದ್ವೇಷಿಸುವ ಜನಗಳು ಗಾಢವಾದ ಅಜ್ಞಾನಾಂಧಕಾರದಲ್ಲಿ ಮುಳುಗುತ್ತಾರೆ. ಈ ಕಾರಣದಿಂದ ವಿವೇಕಿಯಾದವನು ಯಾವಾಗಲೂ ಆಪ್ತರ (ನಿಜವಾದ ದೇವರ) ಮೊದಲನೆ ಜ್ಞಾನವಾದ ಸಮ್ಯಕ್ ಜ್ಞಾನವನ್ನು ಅಭ್ಯಾಸ ಮಾಡಬೇಕು. (೧೦-೭೦)

೫. ವಿಷಯಗಳ ಆಸೆಯಿಂದ ಮೂಢನಾದ ಅಜ್ಞಾನಿಯು ಹಲ್ಲುಗಳಿಂದ ಮೂಳೆಯನ್ನು ಕಚ್ಚುತ್ತಿರುವ ನಾಯಿಯಂತೆ ಆಯಾಸವನ್ನೇ ಸುಖವನ್ನಾಗಿ ತಿಳಿಯುತ್ತಾನೆ. (೧೧-೧೮೫)

೬. ಯಾವ ಪುಣ್ಯಶಾಲಿಯು ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳನ್ನು ರಸಾಯನದೋಪಾದಿಯಲ್ಲಿ ಸೇವಿಸುತ್ತಾನೋ ಅವನು ಅಚಿಂತ್ಯವಾದ ಮೋಕ್ಷ ಪದವಿಯನ್ನು ಹೊಂದುತ್ತಾನೆ. (೧೧-೫೯)

೭. ಇಷ್ಟಾರ್ಥಸಿದ್ಧಿಯನ್ನು ಬಯಸುವವರು ಆಲೋಚಿಸದೆ ಯಾವ ಕೆಲಸವನ್ನು ಮಾಡಬಾರದು. ಆಲೋಚಿಸದೆ ಕೆಲಸ ಮಾಡುವವರಿಗೆ ಇಷ್ಟಾರ್ಥ ಸಿದ್ಧಿಗಳು ಬಹು ದೂರವಾಗಿರುತ್ತವೆ. (೩೨-೫೧)

೮. ಯಥಾರ್ಥ ಭಾಷಣ, ಬಾಹ್ಯ-ಅಭ್ಯಂತರ ಶುದ್ಧಿ, ಸಹನಶೀಲತೆ, ದಾನ, ಬುದ್ಧಿ, ಉತ್ಸಾಹ, ದಯಾ, ಇಂದ್ರಿಯನಿಗ್ರಹ, ಕ್ರೋಧ ಮೊದಲಾದ ಕಷಾಯಗಳ ಉಪಶಮ, ವಿನಯ ಇವುಗಳು ಮನಸ್ಸನ್ನು ಸಂಬಂಧಿಸಿ ಕೊಂಡಿರುವ ಗುಣಗಳಾಗಿವೆ. (೧೫-೨೧೪)

೯. ಶರೀರಕಾಂತಿ, ದೀಪ್ತಿ, ಲಾವಣ್ಯ, ಪ್ರಿಯಭಾಷಣ, ಕಲಾಚಾತುರ್ಯ ಇವುಗಳು ಶರೀರವನ್ನು ಸಂಬಂಧಿಸಿಕೊಂಡಿರುವ ಗುಣಗಳಾಗಿವೆ.(೧೫-೨೧೫)

೧೦. ಹಾಲುಳ್ಳ ಹಸುವಿಗೆ ಉಪದ್ರವ ಪಡಿಸದಿದ್ದರೆ ಹಾಲು ಹೆಚ್ಚುವಂತೆ ಪ್ರಜೆಗಳಿಂದಲೂ ಹೆಚ್ಚು ಪೀಡೆಯನ್ನು ಉಂಟು ಮಾಡದಿರುವ ಕಂದಾಯಗಳಿಂದ ದ್ರವ್ಯವನ್ನು ಸ್ವೀಕರಿಸಬೇಕು. (೧೬-೨೫೪)

೧೧. ಪ್ರಜೆಗಳನ್ನು ದಂಡಿಸುವವನಿಲ್ಲದಿದ್ದರೆ ಈ ಪ್ರಜೆಗಳು ಬಲಿಷ್ಠವಾದ ಮೀನು ಬಲಹೀನಗಳಾದ ಮೀನುಗಳನ್ನು ನುಂಗುವುದೆಂಬ ಮತ್ಸ್ಯನ್ಯಾಯವನ್ನು ಆಶ್ರಯಿಸುವರು. ದುಷ್ಟ ಮನಸ್ಸುಳ್ಳ ಬಲಿಷ್ಠನು ಬಲಹೀನನನ್ನು ಬಾಧೆ ಪಡಿಸುವನು. (೧೬-೨೫೨)

೧೨. ಮನುಷ್ಯರಿಗೆ ಪರರ ಸೇವೆ, ಬಡತನ, ಚಿಂತೆ, ಶೋಕ ಮೊದಲಾದವುಗಳಿಂದ ಉಂಟಾಗುವ ಮಹಾದುಃಖವು ಪ್ರತ್ಯಕ್ಷ ನರಕದಂತೆ ತೋರುತ್ತದೆ. (೧೭-೩೧)

೧೩. ಜೀವನಿಗೆ ಜನ್ಮವು ದುಃಖಕರವಾದದ್ದು. ಅದಕ್ಕಿಂತಲೂ ದುಃಖಕರವಾದದ್ದು ಮುಪ್ಪು, ಅದಕ್ಕಿಂತಲೂ ಹೆಚ್ಚು ದುಃಖಕರವಾದದ್ದು ಮರಣ. ಹೀಗೆ ಅನೇಕ ದುಃಖಗಳೆಂಬ ಸುಳಿಗಳುಳ್ಳ ಜನ್ಮವೆಂಬ ಸಮುದ್ರದಲ್ಲಿ ಪ್ರಾಣಿ ಮುಳುಗಿದೆ. (೧೭-೨೬)

೧೪. ಅನುಭವಿಸುವ ಕಾಲದಲ್ಲಿ ಮಾತ್ರ ರಮಣೀಯವಾಗಿರುವ ಭೋಗಗಳಿಗೆ ಅಧೀನವಾದ ಪುರುಷನು ದೊಡ್ಡವನಾಗಿದ್ದರೂ ಯಾಚಕತ್ವದ ದೋಷದಿಂದ ಕೂಡಲೇ ಹುಲ್ಲಿನಂತೆ ಲಘುವಾಗುವನು. (೧೮-೧೧೨)

೧೫. ರಾಜ್ಯ ಹಾಗೂ ಕುಲವಧು ಇವೆರಡು ಎಲ್ಲರಿಗೂ ಅನುಭವಯೋಗ್ಯವಲ್ಲವು. ಅವೆರಡನ್ನು ಬೇರೆಯವರೊಡನೆ ಯಾವನು ಅನುಭವಿಸುತ್ತಾನೋ ಅವನು ಮನುಷ್ಯನಲ್ಲ, ಪಶುವೇ ಸರಿ. (೩೪-೫೨)

೧೬. ವಿಷವು ಒಂದು ಭವದಲ್ಲಿ ಕೊಲ್ಲುತ್ತದೆ ಅಥವಾ ಕೊಲ್ಲುವುದಿಲ್ಲ. ಅದು ಶ್ರೇಷ್ಠವು. ವಿಷಯಗಳಾದರೋ ಪ್ರಾಣಿಗಳನ್ನು ಅನಂತಾವರ್ತಿ ಕೊಲ್ಲುತ್ತವೆ. ಕಷ್ಟ ! (೩೬-೭೪)

೧೭. ಮನುಷ್ಯ ಜಾತಿ ಒಂದೇ ಆಗಿರುತ್ತದೆ. (೩೮-೪೫)

೧೮. ಪ್ರೀತಿಯಿಂದಾಗಲಿ ಅಪ್ರೀತಿಯಿಂದಾಗಲಿ ಉಂಟಾದ ಸಂಸ್ಕಾರವು

ಸ್ಥಿರವಾಗಿರುತ್ತದೆ. ಆದುದರಿಂದ ಆತ್ಮಸ್ವರೂಪವನ್ನು ತಿಳಿದ ಯಾವನೂ ಯಾವನ ಮೇಲೆಯೂ ದ್ವೇಷವನ್ನು ಮಾಡಬಾರದು. (೫೯-೯೧)

೧೯. ಪರನ್ನು ವಂಚಿಸುವಿಕೆಯೂ, ಪರರಿಂದ ವಂಚಿಸಲ್ಪಡದಿರುವಿಕೆಯೂ ಇದೇ ನಿತ್ಯವೂ ಅರ್ಥಶಾಸ್ತ್ರದ ಅಧ್ಯಯನದ ಪ್ರಯೋಜನ. (೫೯-೧೬೦)

೨೦. ವರನಲ್ಲಿ ಸತ್ಕುಲತ್ವ, ನೀರೋಗತ್ವ, ವಯಸ್ಸು, ಶೀಲ, ಶಾಸ್ತ್ರ ರೂಪ, ಸಂಪತ್ತಿ, ಸ್ವಪಕ್ಷ (ಬಂಧು) ಪರಿವಾರಗಳೆಂಬ ಒಂಬತ್ತು ಗುಣಗಳು ಹೇಳಲ್ಪಟ್ಟಿವೆ. (೬೨-೬೪)

೨೧. ಅಹಿಂಸಾ ಲಕ್ಷಣವುಳ್ಳದೇ ಧರ್ಮ. ಕಾಂಕ್ಷೆಯಿಲ್ಲದವರೇ ಯತಿಗಳು. (೬೩-೮೮೪)

೨೨. ಮಾಂಸ ಮೊದಲಾದ ವಸ್ತುವು ಕೊಡುವುದಕ್ಕೆ ಯೋಗ್ಯವಾದುದಲ್ಲ. ಮಾಂಸವನ್ನು ಇಚ್ಛಿಸುವವನೂ ಪಾತ್ರನಲ್ಲ. ಮಾಂಸವನ್ನು ದಾನ ಮಾಡುವವನೂ ದಾತನಲ್ಲ. ಮಾಂಸವನ್ನು ದಾನ ಮಾಡುವವನೂ, ತೆಗೆದುಕೊಳ್ಳುವವನೂ ಇವರಿಬ್ಬರೂ ನರಕಾಧಿಕಾರಿಗಳೆಂದು ತಿಳಿಯಬೇಕು. (೬೩-೭೮೬)

೨೩. ಹಿಂಸಾಪ್ರಧಾನವಾದ ಶಾಸ್ತ್ರದಿಂದಾಗಲಿ, ನಯರಹಿತ ರಾಜ್ಯದಿಂದಾಗಲಿ ತಪ್ಪುದಾರಿಯಲ್ಲಿರುವ ತಪಸ್ಸಿನಿಂದಾಗಲಿ, ದುಷ್ಟ ಪತ್ನಿಯಿಂದಾಗಲಿ ನಿಶ್ಚಯವಾಗಿ ಹಾನಿಯುಂಟಾಗುವುದು. (೭೨-೧೦೪೭)

೨೪. ಅತಿ ಸ್ನೇಹವು ತಪ್ಪು ದಾರಿಗೆ ಒಯ್ಯುವುದು. (೭೫-೭೧೪)

೨೫. ತ್ಯಾಗವೇ ಪರಮ ಧರ್ಮವು, ತ್ಯಾಗವೇ ಪರಮ ತಪವು, ತ್ಯಾಗದಿಂದ ಈ ಲೋಕದಲ್ಲಿ ಯಶಸ್ಸಿನ ಲಾಭ, ಪರಲೋಕದಲ್ಲಿ ಮಹಾಭ್ಯುದಯ. (೪೨-೧೨೪)

೨೬. ಯಾವ ಶಾಸ್ತ್ರ ಪ್ರಾಣಿಹಿಂಸೆಯನ್ನು ನಿಷೇಧಿಸುವುದೋ ಅದು ಪುರಾಣವೂ ಧರ್ಮಶಾಸ್ತ್ರವೂ ಆಗುವುದು. (೩೯-೨೩)

## ಗ್ರಂಥಋಣ


೧. ಸಂಸ್ಕೃತ ವಾಙ್ಮಯಕ್ಕೆ ಜೈನಕವಿಗಳ ಕಾಣಿಕೆ.
-ಪಂ.ಕೆ. ಭುಜಬಲಶಾಸ್ತ್ರಿ

೨. ಮಹಾಪುರಾಣ.
-ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ

೩. ಮಹಾಪುರಾಣ ಸೂಕ್ತಿಗಳು.
-ಸಂ. ಡಾ. ಎಂ.ಎ. ಜಯಚಂದ್ರ

೪. ಮಹಾಪುರಾಣದ ವೈರಾಗ್ಯೋದಯದ ಚಿತ್ರಣಗಳು.
-ಪ್ರೊ. ಜೀವಂಧರಕುಮಾರ ಹೋತಪೇಟೆ